ಐಕ್ಯರಂಗ

ವಾ ರ ಪ ತ್ರಿ ಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 21 ಮೇ 25, 1986 ಬೆಲೆ 60 ಪೈಸೆ

ಮತ್ತೆ ಪ್ರಜಾಪ್ರಭುತ್ವಕ್ಕೆ ಗಧಾಪ್ರಹಾರ

ತನಿಖಾ ಆಯೋಗಗಳ ವರದಿಗಳನ್ನು ದೇಶದ ಭದ್ರತೆಯ ಹಿತದೃಷ್ಟಿಯಿಂದ ಸಂಸತ್ತು ಅಥವಾ ವಿಧಾನ ಮಂಡಲಗಳಲ್ಲಿ ಮಂಡಿಸದಂತೆ ತಡೆಹಿಡಿಯುವ ಅಧಿಕಾರವನ್ನು ಸುಗ್ರೀವಾಜ್ಞೆಯ ಮೂಲಕ ಕೇಂದ್ರ ಸರಕಾರ ಪಡೆದುಕೊಂಡಿರುವುದು ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳ ಬೆಳವಣಿಗೆಗೆ ಗಧಾಪ್ರಹಾರ ಮಾಡಿದಂತಾಗಿದೆ.

1975 ರಲ್ಲಿ ಇಂದಿರಾ ಗಾಂಧಿ ತುರ್ತುಪರಿಸ್ಥಿತಿಯನ್ನು ಹೇರಿ ಜನಾಭಿಪ್ರಾಯದ ಬಾಯಿಗೆ ಬೀಗ ಹಾಕಿದ್ದರು. ಸಾರ್ವಜನಿಕರಿಗೆ ಸಂಬಂಧಪಟ್ಟ ಮಂತ್ರಿಗಳು, ಅಧಿಕಾರಿಗಳು ಒಳಗೊಂಡ ಯಾವದೇ ಘಟನೆಗಳ ಕುರಿತು

(ಕೊನೆಯ ಪುಟಕ್ಕೆ)

ನಿರುದ್ಯೋಗಿಗಳ ರಾಜ್ಯಮಟ್ಟದ ಸಮಾವೇಶದ ಕರೆ

ಕೆಲಸದ ಹಕ್ಕು ಮೂಲಭೂತ ಹಕ್ಕಾಗಲಿ

ಉದ್ಯೋಗವಿಲ್ಲದವರಿಗೆ ನಿರುದ್ಯೋಗ ಭತ್ತೆ ಸಿಗಲಿ

ಕಾಂಗ್ರೆಸ್ ಸರಕಾರ ಅನುಸರಿಸುತ್ತ ಬಂದ ಬಂಡವಾಳಶಾಹಿ ಪರ ಆರ್ಥಿಕ ನೀತಿಯಿಂದಾಗಿ, ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ಯೋಜನೆಗಳು ಮುಗಿದಂತೆ ಬೆಳೆಯುತ್ತಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ 2 ಕೋಟಿಯಷ್ಟಿದ್ದ ನಿರುದ್ಯೋಗಿಗಳ ಸಂಖ್ಯೆ ಆರನೇ ಯೋಜನೆಯ ಕೊನೆಯಲ್ಲಿ 10 ಕೋಟಿ ತಲುಪಿದೆ.

ರಾಜೀವ ಗಾಂಧಿಯವರು ವಿದೇಶೀ ಬಹು ರಾಷ್ಟ್ರೀಯ ಸಂಸ್ಥೆಗಳಿಗೆ ದೇಶದ ಆರ್ಥಿಕತೆಯಲ್ಲಿ ಕೈಚಾಚಲು ಅವಕಾಶ ಮಾಡಿ ಕೊಟ್ಟು, 21 ನೇ ಶತಮಾನಕ್ಕೆ ಹಾರುವ ಉದ್ದೇಶದಿಂದ ಆಧುನೀಕರಣದ ನೆವ ಹೇಳಿ ಗಣಕೀಕರಣ, ಯಾಂತ್ರಿಕರಣಗಳ ಉಪಯೋಗಕ್ಕೆ ಪೂರ್ಣ ಅವಕಾಶ ಕೊಟ್ಟು ನಿರುದ್ಯೋಗಿಗಳ ಸೈನ್ಯ ಹೆಚ್ಚಿಸುತ್ತಿದ್ದಾರೆ. ಆದ್ದರಿಂದ ಕಾಂಗ್ರೆಸ್ಸಿನ ಆರ್ಥಿಕ ನೀತಿ ವಿರುದ್ಧ, ಕೆಲಸದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಸಂವಿಧಾನದಲ್ಲಿ ಸೇರಿಸಲು, ಉದ್ಯೋಗ ಇಲ್ಲದವರಿಗೆ ನಿರುದ್ಯೋಗ ಭತ್ತೆ ಸಿಗುವಂತೆ ಮಾಡಲು ಸಂಘಟಿತ ಚಳುವಳಿ ನಡೆಯಬೇಕೆಂದೂ, ಕಾರ್ಮಿಕ ಸಂಘಗಳು ನಿರುದ್ಯೋಗಿಗಳ ಹೋರಾಟಕ್ಕೆ ಬೆಂಬಲ ನೀಡಬೇಕೆಂದೂ, ಸಿ ಐ ಟಿಯು ಅಧ್ಯಕ್ಷರಾದ ಬಿ ಟಿ. ರಣದಿವೆಯವರು ಮೇ 22 ರಂದು ಬೆಂಗಳೂರಿನಲ್ಲಿ ನಿರುದ್ಯೋಗಿಗಳ ರಾಜ್ಯ ಮಟ್ಟದ ಸಮಾವೇಶವನ್ನು ಉದ್ಘಾಟನೆ ಮಾಡುತ್ತ ಕರೆ ನೀಡಿದರು.

ಈ ಸಮಾವೇಶವನ್ನು ಸಂಘಟಿಸಿದ್ದಕ್ಕಾಗಿ ಕರ್ನಾಟಕ ರಾಜ್ಯ ಸಿ.ಐ.ಟಿ.ಯು. ವನ್ನು ಅಭಿನಂದಿಸುತ್ತ, ಕೂಲಿಗಾರರ ಸಂಘಟನೆಗಳು ಬರೇ ಕೆಲಸದಲ್ಲಿರುವವರಿಗಷ್ಟೇ ಸೀಮಿತವಾಗಿರುವುದರಿಂದ, ನಿರುದ್ಯೋಗಿಗಳತ್ತ ಅವರು ಗಮನ ಹರಿಸುತ್ತಿಲ್ಲೆಂದೂ, ಆದರೆ ಸಂಘಟಿತ ಕಾರ್ಮಿಕ ವರ್ಗ ನಿರುದ್ಯೋಗಿಗಳಿಗಾಗಿ ಹೋರಾಡಬೇಕಾದ್ದು ಅವರ ಆದ್ಯಕರ್ತವ್ಯವೆಂದೂ ಹೇಳಿದರು.

ಟಾಟಾ, ಬಿರ್ಲಾರವರ ಆದಾಯ ಹೆಚ್ಚುತ್ತಿರುವಂತೆಯೇ ನಿರುದ್ಯೋಗಿಗಳ ಸಂಖ್ಯೆಯೂ ಹೆಚ್ಚುತ್ತಿದೆಂದೂ, ದೇಶದ ಸಂಪತ್ತು ಹೆಚ್ಚಾದಂತೆ ನಿರುದ್ಯೋಗಿಗಳ ಸಂಖ್ಯೆಯೂ ಬೆಳೆಯುತ್ತಿರುವುದು ಬಂಡವಾಳಶಾಹಿ ಬೆಳವಣಿಗೆಯ ಲಕ್ಷಣವೆಂದೂ, ಕಾಂಗ್ರೆಸ್‌ಸರಕಾರ ಯೋಜನೆಗಳು ಯಶಸ್ವಿ ಆಗಿವೆಯೆಂದು ಪ್ರಚಾರ ಮಾಡುತ್ತಿರುವಾಗ ಉದ್ಯೋಗವಿಲ್ಲದವರ ಸೈನ್ಯ ಬೆಳೆಯುತ್ತಿರುವುದಕ್ಕೆ ಕಾರಣವೇನೆಂಬುದನ್ನು ಪ್ರಚಾರ ಮಾಡುವುದಿಲ್ಲೆಂದು ಹೇಳಿದರು.

ಅತಿ ಮುಂದುವರಿದ ದೇಶಗಳಾದ ಅಮೇರಿಕ, ಇಂಗ್ಲೆಂಡ್‌ಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತಿರುವಾಗ, ಸಮತಾವಾದಿ ದೇಶಗಳಲ್ಲಿ ಆ ರೋಗ ಇಲ್ಲದಿರಲಿಕ್ಕೆ ಸಮತಾವಾದಿ ಆರ್ಥಿಕತೆಯೇ ಕಾರಣವೆಂದೂ ಆದ್ದರಿಂದ ಕಾಂಗ್ರೆಸ್ ಸರಕಾರದ ಬದಲಾಗಿ ನಿರುದ್ಯೋಗ ಬಗೆಹರಿಸುವ ಪರ್ಯಾಯ ವ್ಯವಸ್ಥೆಯ ರಚನೆಗಾಗಿ ಹೋರಾಡಬೇಕೆಂದೂ ಕರೆ ನೀಡಿದರು.

ಹೋರಾಟದಿಂದ ಪಾಶ್ಚಾತ್ಯ ದೇಶಗಳಲ್ಲಿ ನಿರುದ್ಯೋಗ ಭತ್ತೆ ಪಡೆಯಲು ಸಾಧ್ಯವಾಗಿದೆ. ಭಾರತದಲ್ಲಿ ಅದಿನ್ನೂ ಸಿಕ್ಕುತ್ತಿಲ್ಲ. ಆದ್ದರಿಂದ ಸಂಘಟಿತ ಕಾರ್ಮಿಕ ವರ್ಗ ನಿರುದ್ಯೋಗಿಗಳಿಗೆ ಪರಿಹಾರ ಸಿಗುವಂತೆ ಹೋರಾಡಬೇಕು. ಉದೋಗ ಕೊಡಿ ಇಲ್ಲವೇ ನಿರುದ್ಯೋಗ ಭತ್ತೆ ಕೊಡಿ ಎಂದು ಕೇಳಲು ನಿರುದ್ಯೋಗಿಗಳ ಸೈನ್ಯ ಲೋಕಸಭೆಗೆ ಮುತ್ತಿಗೆ ಹಾಕಲಿ, ವಿರೋಧ ಪಕ್ಷಗಳೆಲ್ಲ ನಿರುದ್ಯೋಗ ಭತ್ತೆ ಸಿಗಬೇಕೆಂಬ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಿ.

ಗ್ರಾಮೀಣ ಪ್ರದೇಶದಲ್ಲಿ ಕೂಲಿಯೂ ಕಡಿಮೆ, ಕೆಲಸದ ದಿನವೂ ಕಡಿಮೆ. ಆದರೆ ನಿರುದ್ಯೋಗ ಜಾಸ್ತಿ. ಯಾವ ಸುಧಾರಣೆಗಳನ್ನೂ ಕಾಣದ ಹಳ್ಳಿಗಳು ಕೊಳಚೆ ಪ್ರದೇಶಗಳಂತೆ ಬೆಳೆಯುತ್ತಿವೆಂದರು.

ನಿರುದ್ಯೋಗಿ ಯುವಕರ ಸಂಘಟಿತ ಹೋರಾಟದ ಅಭಾವದಿಂದಾಗಿ, ಆ ಯುವ ಶಕ್ತಿಯನ್ನು ಪ್ರತಿಗಾಮಿಗಳು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಪಂಜಾಬ್, ಮಹಾರಾಷ್ಟ್ರ ಕರ್ನಾಟಕಗಳಲ್ಲಿ ಭಯೋತ್ಪಾದಕತೆಗೆ,

(ಕೊನೆಯ ಪುಟಕ್ಕೆ)

ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರಿಗೆ ಬಿ. ಟಿ. ಆರ್. ಕರೆ

ದೇಶದ ಆರ್ಥಿಕ ಸ್ವಾತಂತ್ರ್ಯರಕ್ಷಣೆಗೆ ಹೋರಾಡಿ

ರಾಜೀವ್ ಗಾಂಧಿ ಸರಕಾರದ ಆರ್ಥಿಕ ನೀತಿಗಳಿಂದಾಗಿ ಸಾರ್ವಜನಿಕ ಉದ್ದಿಮೆಗಳು ಖಾಸಗೀ ಬಂಡವಾಳಶಾಹಿಗಳ, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಹದ್ದುಗಳ ಪಾಲಾಗುವುದರ ವಿರುದ್ಧ, ಸಾರ್ವಜನಿಕ ಉದ್ದಿಮೆಗಳ ಬಗ್ಗೆ ತಪ್ಪು ಟೀಕೆ ಮಾಡುತ್ತಿರುವ ಪ್ರತಿಗಾಮಿಗಳ ವಿರುದ್ಧ ಮತ್ತು ತನ್ಮೂಲಕ ದೇಶದ ಆರ್ಥಿಕಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವ ಮಹತ್ವದ ಹೋರಾಟದಲ್ಲಿ ಸಾರ್ವಜನಿಕ ಉದ್ದಿಮೆಯ ಕಾರ್ಮಿಕ ಸಂಘಗಳು ಹಾಗೂ ಕಾರ್ಮಿಕರು ಪ್ರಮುಖಪಾತ್ರವಹಿಸಬೇಕಾಗಿದೆ. 'ಇಂತಹಹೋರಾಟದ ಮೂಲಕ ದೇಶದ ಕಾರ್ಮಿಕ ಆಂದೋಲನದ ಇತಿಹಾಸದಲ್ಲಿ ಒಂದು ಹೊಸ ಪುಟ ಸೇರಿಸಿ' ಎಂದು ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಬಿ.ಟಿ.ರಣದಿವೆಯವರು ಬೆಂಗಳೂರಿನ ಪುರಭವನದಲ್ಲಿ ಏರ್ಪಡಿಸಲಾಗಿದ್ದ ವಿಚಾರ ಗೋಷ್ಠಿಯನ್ನು ಉದ್ಘಾಟಿಸುತ್ತ ಕರೆ ನೀಡಿದರು.

ಮೊದಲು ಮೇ27 ರಂದು ಈ ದಿನಾಚರಣೆ ನಡೆಸಲು ನಿರ್ಧರಿಸಿದ್ದರೂ, ಅದಾಗಲೇ ಖಾಸಗೀಕರಣ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವ ರಕ್ಷಣಾವಲಯದ ಕಾರ್ಮಿಕರು ಮೇ 21 ರಂದು ಒಂದು ದಿನದ ಅಖಿಲ ಭಾರತ ಪ್ರತಿಭಟನಾ ಮುಷ್ಕರ ನಡೆಸಲು ನಿರ್ಧರಿಸಿದ್ದರಿಂದ ಮೇ 21 ರಂದು ಈ ದಿನಾಚರಣೆ ನಡೆಸಲು ನಿರ್ಧರಿಸಲಾಯಿತು. ಈ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಸಿ.ಐ.ಟಿ.ಯು. ರಾಜ್ಯ ಸಮಿತಿ ಈ ವಿಚಾರ ಗೋಷ್ಠಿಯನ್ನು ಏರ್ಪಡಿಸಿತ್ತು. ರಾಜ್ಯ ಸಿ. ಐ. ಟಿ. ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಗೋಷ್ಠಿಯಲ್ಲಿ ಹೆಚ್. ಎ. ಎಲ್., ಬಿ. ಇ. ಎಲ್., ಬಿ. ಇ. ಎಮ್. ಎಲ್., ವಿ. ಐ. ಎಸ್. ಎಲ್., ಬ್ಯಾಂಕ್, ವಿಮೆ ಐ. ಟಿ ಐ. ಮುಂತಾದ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು, ನೌಕರರು ಪಾಲುಗೊಂಡರು. ಸಾರ್ವಜನಿಕ ಉದ್ದಿಮೆಗಳ ಅಧಿಕಾರಿಗಳ ಕೆಲವು ಪ್ರತಿನಿಧಿಗಳೂ ಈ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದರು.

ದುರದೃಷ್ಟವಶಾತ್ ರಕ್ಷಣಾ ವಲಯದ ಕಾರ್ಮಿಕರ ಮಹಾಸಂಘಮುಷ್ಕರ ಹಿಂತೆಗೆದುಕೊಳ್ಳಲು ನಿರ್ಧರಿಸಿದ್ದರೂ, ರಕ್ಷಣಾ ವಲಯದ ಕಾರ್ಮಿಕರು ಈ ದಿನವನ್ನು ·ಪ್ರತಿಭಟನಾ ದಿನವಾಗಿ ಆಚರಿಸುತ್ತಿದ್ದಾರೆಂದು ಆಶಿಸಿದ ಕಾಂ. ಬಿ ಟಿ. ರಣದಿವೆ ತಮ್ಮ ಉದ್ಘಾಟನಾ ಭಾಷಣದಲ್ಲಿ ರಾಜೀವ್ ಗಾಂಧಿಯವರ ಹೊಸ ಆರ್ಥಿಕ ನೀತಿಯಿಂದಾಗಿ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ, ಅಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆಹಾಗು ಸಮಸ್ತ ದೇಶದ ಆರ್ಥಿಕತೆಗೆ ಉಂಟಾಗಿರುವ ಅಪಾಯಗಳನ್ನು ಮನದಟ್ಟಾಗುವಂತೆ ವಿವರಿಸಿದರು.

ಯಾರ ಒಳಿತಿಗಾಗಿ ?

ಸಾರ್ವಜನಿಕ ಉದ್ದಿಮೆಯ ಕಾರ್ಮಿಕರ ಮೇಲೆ ಹೊಸ ಆರ್ಥಿಕ ನೀತಿಯಿಂದಾಗಿ ನಡೆಯಲಾರಂಭಿಸಿರುವ ಆಕ್ರಮಣದ ಬಗ್ಗೆ ಮಾತನಾಡುತ್ತಾ ಬಿ.ಟಿ ಆರ್. ಎರಡು ಅಂಶಗಳನ್ನು ಗುರುತಿಸಿದರು– ಒಂದು ದಕ್ಷತೆ ಅಥವಾ ಲಾಭದಾಯಕತೆ ಹಾಗೂ ಎರಡನೆಯದು ಆಧುನೀಕರಣ. ಸಾರ್ವಜನಿಕ ಉದ್ದಿಮೆಗಳಲ್ಲಿ 2ನ್ನು ಬಿಟ್ಟು ಉಳಿದೆಲ್ಲಾ ಉದ್ದಿಮೆಗಳು ನಷ್ಟದಲ್ಲಿವೆ. ಈ ನಷ್ಟಕ್ಕೆ ಕಾರಣವೇನೇ ಇರಲಿ, ದುರಾಡಳಿತವಾಗಿರಲಿ, ಅಧಿಕಾರಶಾಹಿಯಾಗಲ್ಲಿ ಸರಕಾರದತಪ್ಪು ಧೋರಣೆಯೇ ಆಗಲಿ– ಈ ಉದ್ದಿಮೆಗಳು ಹೇಗಾದರೂ ಲಾಭಗಳಿಸಲೇಬೇಕು, ಇಲ್ಲವಾದರೆ ಅವನ್ನು ಮುಚ್ಚಬೇಕು. ಈ ನೀತಿಯನ್ನನುಸರಿಸಿದರೆ ದೊಡ್ಡ ಪ್ರಮಾಣದಲ್ಲಿ ಉದ್ದಿಮೆಗಳನ್ನು ಮುಚ್ಚಿ ಅಲ್ಲಿ ದುಡಿಯುತ್ತಿರುವ ಕಾರ್ಮಿಕರು ಬೀದಿಪಾಲಾಗುತ್ತಾರೆ.

ರಾಜೀವ್ ಗಾಂಧಿಯವರ 21 ನೇ ಶತಮಾನಕ್ಕೆ ನೆಗೆಯುವ ಅವಸರದ ಬಗ್ಗೆ ಮಾತನಾಡುತ್ತಾ ಕಾಂ.ರಣದಿವೆ "ಆಧುನೀಕರಣದ ಇಚ್ಛೆ ಹೊಂದಿರುವುದರಲ್ಲಿ ತಪ್ಪೇನಿಲ್ಲ. ಯಾಕೆಂದರೆ

(ಕೊನೆಯ ಪುಟಕ್ಕೆ)

ಜಾತೀಯವಾದಿ–ಛಿದ್ರಕಾರಿ ಶಕ್ತಿಗಳ ವಿರುದ್ಧ ಕಾರ್ಮಿಕ ಸಂಘಗಳ ರಾಷ್ಟ್ರೀಯ ಸಮಾವೇಶ

ಆಗಸ್ಟ್ 9 ರಾಷ್ಟ್ರೀಯ ಭಾವೈಕ್ಯ ದಿನವನ್ನಾಗಿ ಆಚರಿಸಲು ಕರೆ!

ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ. ಐ.ಎನ್.ಟಿ.ಯು.ಸಿ., ಬಿ.ಎಂ.ಎಸ್. ಮೊದಲಾದ ಕೇಂದ್ರಿಯ ಕಾರ್ಮಿಕ ಸಂಘಗಳ ಪರವಾಗಿ ದೇಶದಲ್ಲಿ ಬೆಳೆದು ಬರುತ್ತಿರುವ, ದೇಶದಲ್ಲಿ ಅಶಾಂತಿ ಉಂಟು ಮಾಡುತ್ತಿರುವ, ದೇಶದ ಸಮಗ್ರತೆಗೆ ಧಕ್ಕೆ ಉಂಟು ಮಾಡುತ್ತಿರುವ ಜಾತೀಯ ಹಾಗೂ ಛಿದ್ರಕಾರಿ ಶಕ್ತಿಗಳ ವಿರುದ್ಧ ಸಂಘಟಿತ, ಸಂಯುಕ್ತ ಅಭಿಪ್ರಾಯ ಉಂಟುಮಾಡಿ, ಅವುಗಳ ವಿರುದ್ಧ ಹೋರಾಡಬೇಕೆಂದು ನಿರ್ಧರಿಸಿ ಮೇ 11 ರಂದು ದಿಲ್ಲಿಯಲ್ಲಿ ಸಮಾವೇಶ ನಡೆಸಲಾಯಿತು. ಆ ಸಮಾವೇಶದಲ್ಲಿ ಒಕ್ಕೊರಲಿನಿಂದ ಕೆಳಕಂಡ ನಿರ್ಣಯವನ್ನು ಪಾಸು ಮಾಡಲಾಯಿತು.

ರಾಷ್ಟ್ರೀಯ ಐಕ್ಯತೆಗಾಗಿ ಮತ್ತು ಜಾತೀಯ ವಾದದ ಛಿದ್ರಕಾರಿ ಶಕ್ತಿಗಳ ವಿರುದ್ಧ ನಡೆದ ಕಾರ್ಮಿಕ ಸಂಘಗಳ ಈ ಸಮಾವೇಶವು ದೇಶದಲ್ಲಿ ಅತಿಯಾಗಿ ಬೆಳೆದು ಬರುತ್ತಿರುವ ಜಾತೀಯ ಮನೋಭಾವ. ಬೇರೆ ಬೇರೆ ರೂಪದಲ್ಲಿ ಹುಟ್ಟಿಕೊಳ್ಳುತ್ತಿರುವ ಮತೀಯ ಹಾಗೂ ಮೂಲಭೂತವಾದ, ಅದರಿಂದಾಗಿ ಗುಂಪು ಗೊಳಗಾಗುತ್ತಿರುವ ಘರ್ಷಣೆಗಳ ಕುರಿತು ಈ ಸಮಾವೇಶ ತನ್ನ ಗಂಭೀರ ಚಿಂತನೆಯನ್ನು ಮಾಡುತ್ತದೆ. ಇವುಗಳೆಲ್ಲ ದೇಶದ ಐಕ್ಯತೆಯನ್ನೂ ನಿಷ್ಠೆಯನ್ನೂ ಬಲಹೀನಗೊಳಿಸುತ್ತವೆ. ಅಂಥ ಭೀತಿ ಎಲ್ಲಿತನಕ ಹೋಗಿದೆಯೆಂದರೆ ಪಂಜಾಬಿನಲ್ಲಿ ಈ ಪ್ರತ್ಯೇಕತಾವಾದಿ ಶಕ್ತಿಗಳು ದೇಶದ ಐಕ್ಯತೆಯನ್ನೇ ನಾಶ ಮಾಡುವ ಪ್ರಯತ್ನದಲ್ಲಿರುವುದನ್ನು ಕಾಣಬಹುದಾಗಿದೆ.

ಧರ್ಮೀಯ, ಜಾತಿಯ, ಭಾಷಿಕ, ಸಂಕುಚಿತ ಭಾವನೆಯು ಹಾಗೆಯೇ ಇನ್ನಿತರ ಸ್ವಹಿತ ಸಾಧಕರು ಪ್ರೋತ್ಸಾಹ ನೀಡುತ್ತಿರುವ ಎಲ್ಲ ಪ್ರಾದೇಶಿಕ ಶಕ್ತಿಗಳ ಕುರಿತು ಎಚ್ಚರಿಕೆಯಿಂದಿರಬೇಕೆಂದು ಈ ಸಮಾವೇಶ ಕಾರ್ಮಿಕ ವರ್ಗಕ್ಕೆ ಎಚ್ಚರಿಕೆ ನೀಡುತ್ತದೆ ಸ್ವಹಿತಸಾಧಕ ಶಕ್ತಿಗಳು ಭಿನ್ನಾಭಿಪ್ರಾಯ, ಪ್ರಕ್ಷೋಭೆ, ಹಿಂಸಾಕೃತ್ಯಗಳನ್ನುಂಟು ಮಾಡಲು ಎಂಥ ಸಂದರ್ಭವನ್ನೂ ಬಿಟ್ಟುಕೊಡುವುದಿಲ್ಲ. ಅಂಥ ಅಪಾಯಕಾರಿ ಪ್ರಯತ್ನಗಳ ಉದಾಹರಣೆಗಳನ್ನೊಳಗೊಂಡ 22-3-86 ರಂದು ನಡೆದ ಕಾರ್ಮಿಕ ಸಂಘಗಳ ಜಂಟೀ ಸಭೆಯಲ್ಲಿ ನಿರ್ಣಯಕ್ಕೆ ಈ ಸಮಾವೇಶ ಬೆಂಬಲ ನೀಡುತ್ತದೆ, ಯಾವ ಸಂದರ್ಭದಲ್ಲಿಯೂ ಕೂಡ ಭಾರತದ ಸಂವಿಧಾನ ಮತ್ತು ಜಾತ್ಯಾತೀತತೆಗೆ ಅಪಾಯ ಉಂಟುಮಾಡುವಂಥ ಯಾವ ಸವಲತ್ತನ್ನೂ ಕೊಡ ಮಾಡಬಾರದೆಂದು ಸಮಾವೇಶ ಬಲವಾಗಿ ಅಭಿಪ್ರಾಯ ಪಡುತ್ತದೆ.

ಧರ್ಮೀಯ, ಜಾತಿಯ, ಪ್ರಾದೇಶಿಕ ಸಂಕುಚಿತತೆ ಹಾಗೂ ಇನ್ನಿತರ ವಿಭಜಕ ಶಕ್ತಿಗಳಿಂದಾಗಿ ಕೈಗಾರಿಕಾ ಕೇಂದ್ರಗಳಲ್ಲಿ ಹಿಂಸಾ ಕೃತ್ಯಗಳು ಉಂಟಾಗುತ್ತಿರುವುದಕ್ಕೆ ಈ ಸಮಾವೇಶ ತನ್ನ ಭೀತಿಯನ್ನು ವ್ಯಕ್ತಮಾಡುತ್ತದೆ. ನ್ಯಾಯುವಾದ ಬೇಡಿಕೆಗಳಿಗಾಗಿ ನಡೆಸುವ ಹೋರಾಟಗಳಲ್ಲಿ ಕಾರ್ಮಿಕ ವರ್ಗದ ಸಹೋದರತ್ವದ ಮೇಲೆ ಅಂಥ ಘಟನೆಗಳು ಕೆಟ್ಟ ಪರಿಣಾಮವನ್ನುಂಟು ಮಾಡುತ್ತದೆ.

ಜಾತಿಯ ದಂಗೆಗಳನ್ನು ಪರಿಣಾಮಕಾರಿಯಾಗಿ ಎದುರಿಸುತ್ತಿರುವುದರಲ್ಲಿ ನಮ್ಮ ದೇಶದ ಹಲವಾರು ಭಾಗಗಳಲ್ಲಿ ಆಡಳಿತೆ ತನ್ನ ಅಸಮರ್ಥತೆಯನ್ನು ತೋರ್ಪಡಿಸಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನ-ಆದಿವಾಸಿಗಳು ಇದಕ್ಕೆ ಬಲಿಯಾಗಿದ್ದಾರೆ. ತಪ್ಪಿತಸ್ತರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕೆಂದೂ, ಆಡಳಿತೆಯನ್ನು ಸರಿಪಡಿಸಬೇಕೆಂದೂ ಈ ಸಮಾವೇಶ ಕರೆ ಕೊಡುತ್ತದೆ.

ಯಾವ ಜಾತಿ, ಮತ, ಧರ್ಮ, ಭಾಷೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲರಿಗೂ ರಕ್ಷಣೆ ನೀಡುವ ಅವಶ್ಯಕತೆಯನ್ನು ಒತ್ತಿ ಹೇಳುತ್ತದೆ. ಕೆಲವು ವಿದೇಶಿ ಶಕ್ತಿಗಳು ಮತ್ತು ಸಂಸ್ಥೆಗಳು ಛಿದ್ರಕಾರಿ ಶಕ್ತಿಗಳಿಗೆ ಗುಪ್ತರೀತಿಯಿಂದ ಸಹಾಯ ಮಾಡುತ್ತಿರುವುದರ ವಿರುದ್ಧ ಕಾರ್ಮಿಕ ವರ್ಗವನ್ನು ಎಚ್ಚರಿಸುತ್ತದೆ.

ರಾಷ್ಟ್ರೀಯ ಸ್ವಾತಂತ್ರ್ಯದ ಚಳುವಳಿಯ ಸಮಯದಲ್ಲಿ ಜಾತಿ ಮತಗಳನ್ನೆಲ್ಲ ಕಡೆಗಣಿಸಿ ಎಲ್ಲರನ್ನೂ ಒಟ್ಟುಗೂಡಿಸಿದ ಪರಂಪರೆಯುಳ್ಳ ನಮ್ಮ ಕಾರ್ಮಿಕವರ್ಗ ಛಿದ್ರಕಾರಿ ಶಕ್ತಿಗಳ ವಿರುದ್ಧ ಪರಿಣಾಮಕಾರಿಯಾಗಿ ಹೋರಾಡಿ ರಾಷ್ಟ್ರದ ಐಕ್ಯತೆ ಮತ್ತು ಸಾಮಾಜಿಕ ಬೆಳವಣಿಗೆಗಾಗಿ ಚಳುವಳಿ ಮುಂದುವರಿಸುತ್ತದೆಂಬ ಆಶೆ ವ್ಯಕ್ತಮಾಡುತ್ತದೆ. ಸಾಮಾಜಿಕ-ಆರ್ಥಿಕ ಬದಲಾವಣೆಗೆ ಕಾರ್ಮಿಕ ವರ್ಗದ ಚಳುವಳಿಯ ಪಾತ್ರ ಮಹತ್ವ ಆದಕ್ಕೆ ಕಾರ್ಮಿಕ ವರ್ಗದ ಐಕ್ಯತೆ ಅತ್ಯವಶ್ಯ ಧಾರ್ಮಿಕ ಭಾವನೆಗಳಿಗೆ ಯಾವುದೇ ರೀತಿಯಲ್ಲಿಯೂ ಆತಂಕ ಉಂಟಾಗದಂತೆ ನೋಡಿಕೊಂಡು, ಜಾತಿಯ, ಸಮಾಜದ್ರೋಹಿ ಶಕ್ತಿಗಳನ್ನೆಲ್ಲ ಕಂಡುಹಿಡಿದು, ಅವುಗಳನ್ನೆಲ್ಲ ಬಯಲಿಗೆಳೆದು, ಪ್ರತ್ಯೇಕಿಸಿ, ಅವುಗಳ ನೀಚ ಕುತಂತ್ರಗಳನ್ನು ವಿಫಲಗೊಳಿಸಬೇಕೆಂದು ಜನತೆಗೂ ಮುಖ್ಯವಾಗಿ ಕಾರ್ಮಿಕವರ್ಗಕ್ಕೂ ಸಮಾವೇಶ ಕರೆ ಕೊಡುತ್ತದೆ. ಜಾತಿ, ಧರ್ಮ ಮುಂತಾದ ಸಂಕುಚಿತ ಭಾವನೆಯ ತಳಹದಿಯಲ್ಲಿ ಕಾರ್ಮಿಕ ಸಂಘಗಳನ್ನು ನಿರ್ಮಿಸುವುದನ್ನು ವಿರೋಧಿಸುತ್ತದೆ.

ರಾಷ್ಟ್ರೀಯ ಭಾವೈಕ್ಯತೆಯ ಸಲುವಾಗಿ ಜಾಗೃತಿಯನ್ನುಂಟು ಮಾಡಲು, ಎಲ್ಲ ತರದ ಛಿದ್ರಕಾರಿ ಶಕ್ತಿಗಳನ್ನೆದುರಿಸಲು ಆಗಸ್ಟ 9 ರಂದು ರಾಷ್ಟ್ರೀಯ ಭಾವೈಕ್ಯ ದಿನವನ್ನಾಗಿ ಆಚರಿಸಬೇಕೆಂದು ಎಲ್ಲ ಕಾರ್ಮಿಕ ಸಂಘಗಳಿಗೆ ಕರೆ ಕೊಡುತ್ತದೆ. ಆ ಗುರಿಯನ್ನು ಸಾಧಿಸಲು ಎಲ್ಲ ರಾಜ್ಯ ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ಜಂಟೀ ಸಮಾವೇಶಗಳನ್ನೂ, ಮತಪ್ರದರ್ಶನಗಳನ್ನೂ, ಸಾರ್ವಜನಿಕ ಸಭೆಗಳನ್ನೂ ಏರ್ಪಡಿಸಬೇಕೆಂದು ನಿರ್ಣಯಿಸುತ್ತದೆ.

ಕರ್ನಾಟಕದಿಂದ ಪಿ.ಕೆ. ಸುಬ್ರಮಣಿ ಮುಹಮ್ಮದ್ ದಸ್ತಗೀರ ಮತ್ತು ಶಂಕರ ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ತೋಟ ಕಾರ್ಮಿಕರ ಸುಲಿಗೆಯ ವಿರುದ್ಧ ಹೋರಾಟ

ಫಲವತ್ತಾದ ಕಾಫಿ, ಚಹಾ, ರಬ್ಬರ ಮೊದಲಾದ ತೋಟಗಳಲ್ಲಿ ಲಕ್ಷಾವಧಿ ಜನ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ದುಡಿಯುತ್ತಿದ್ದು, ಅವರಿಗೆ ಯಾವ ನಾಗರಿಕ ಸೌಲಭ್ಯಗಳು ದೊರೆಯುತ್ತಿಲ್ಲೆಂದೂ ಆ ಕಾರಣದಿಂದ ಜೂನ್ 16 ರಂದು ದೇಶಾದ್ಯಂತ ಒಂದು ದಿನದ ಚಳುವಳಿ ನಡೆಸಿ, ಸೆಪ್ಟೆಂಬರ್ ತಿಂಗಳಲ್ಲಿ ಅದನ್ನು ತೀವ್ರಗೊಳಿಸಬೇಕೆಂದೂ ಅಖಿಲ ಭಾರತ ತೋಟ ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಿಮಲ್ ರಣದಿವೆಯವರು ತಾ|| 17 ರಂದು ಕರ್ನಾಟಕ ತೋಟ ಕಾರ್ಮಿಕರ ಸಮಾವೇಶವನ್ನು ಚಿಕ್ಕಮಗಳೂರಿನಲ್ಲಿ ಉದ್ಘಾಟನೆ ಮಾಡುತ್ತ ಕರೆಕೊಟ್ಟರು. ದೇಶದ ಎಲ್ಲಾ ರಾಜ್ಯಗಳಲ್ಲಿ ಸರಿಸಮಾನ ವೇತನ ಸಿಗದಿರುವುದಕ್ಕೂ ಅಸಮಾಧಾನ ವ್ಯಕ್ತ ಮಾಡಿ, ಪ್ಲಾಂಟೇಶನ್ ಕೆಲಸಗಾರರಿಗೆ ಸರಿಸಮಾನ ವೇತನಕ್ಕಾಗಿ ಹೋರಾಡಬೇಕೆಂದು ಹೇಳಿದರು. ಒಂದೆಡೆ ಪ್ಲಾಂಟರ್‌ಗಳು ಅಪಾರ ಲಾಭಗಳಿಸುತ್ತಿರುವಾಗ, ನಾಗರೀಕತೆಯ ಸಂಪರ್ಕವಿಲ್ಲದ ಅತ್ಯಂತ ಹಿಂದುಳಿದ ಕೆಲಸಗಾರರು ಕಡಿಮೆ ಸಂಬಳದಲ್ಲಿ, ಔಷದ್ರೋಪಚಾರದ ವ್ಯವಸ್ಥೆಯಿಲ್ಲದೆ, ಮನೆ, ಕುಡಿಯುವ ನೀರು ಕೂಡ ಲಭ್ಯವಾಗದೆ, ಹೀನಾಯ ಪರಿಸ್ಥಿತಿಯಲ್ಲಿ ದುಡಿಯುತ್ತಿದ್ದಾರೆ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ 39 ವರ್ಷಗಳ ನಂತರ, ಸಂಘ ಕಟ್ಟಿ ಹೋರಾಡಿದರೆ ಗುಂಡಾಗಿರಿ, ಪೋಲೀಸರ ದಬ್ಬಾಳಿಕೆ, ಕೆಲಸದಿಂದ ಕಿತ್ತು ಹಾಕುವಿಕೆಯಂಥ ಗಂಡಾಂತರವಿದೆ. ತೋಟ ಕಾರ್ಮಿಕರ ಕಾಯಿದೆ ಬರೇ ಪೇಪರಿನಲ್ಲೇ ಉಳಿದಿದೆ ಪುರುಷರ ಜೊತೆಯಲ್ಲಿ ದುಡಿಯುವ ಮಹಿಳೆಯರೂ ಹೆಗಲು ಜೋಡಿಸಿ ಹೋರಾಡಿದರೆ ಮಾತ್ರ ಬೇಡಿಕೆ ಪಡೆಯಲು ಸಾಧ್ಯ. ಆದ್ದರಿಂದ ಕರ್ನಾಟಕದ ತೋಟ ಕಾರ್ಮಿಕರೆಲ್ಲ ಸಂಘಟಿತರಾಗಬೇಕೆಂದು ಕರೆ ನೀಡಿದರು.

ಸಿಂಧನೂರು
ಅ. ಭಾ. ಪ್ರ. ಮಹಿಳಾ ಸಂಘಟನೆ
ಬರಿ ಕೊಡಗಳ ಮೆರವಣಿಗೆ

ಸಿಂಧನೂರಿನ ನಾಗರಿಕರಿಗೆ ಶುದ್ಧವಾದ ಕುಡಿಯುವ ನೀರಿಗಾಗಿ. ಪಾಯಖಾನೆಗಳ, ಚರಂಡಿಗಳ ನಿರ್ಮಾಣಕ್ಕಾಗಿ ಮತ್ತು ಊರಿನ ಸ್ವಚ್ಛತೆಗಾಗಿ, ಹಾಗೂ ಇದ್ದ ಕಕ್ಕಸುಗಳ ಸ್ವಚ್ಛತೆ ಮತ್ತು ವಿದ್ಯುಚ್ಛಕ್ತಿ ವ್ಯವಸ್ಥೆ, ಹೀಗೆ ಹಲವಾರು ಬೇಡಿಕೆಗಳನ್ನು ಇಟ್ಟುಕೊಂಡು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ, ಹಾಗೂ ನಗರದ ಪ್ರಗತಿಪರ ಸಂಘಟನೆಗಳ ಬೆಂಬಲದೊಂದಿಗೆ ದಿನಾಂಕ 6–5–86 ರಂದು ಟಿ. ಎಮ್. ಸಿ. ಕಾಲೋನಿ (ಮಹಿಬೂಬ ಕಾಲೋನಿ) ಯಿಂದ ಸುಮಾರು 500 ಜನರ ಖಾಲಿ ಕೊಡಗಳ ಮೆರವಣಿಗೆಯೊಂದಿಗೆ ಪುರಸಭೆಗೆ ತೆರಳಿ ಬೇಡಿಕೆಗಳಿಗಾಗಿ ಒತ್ತಾಯಿಸಿದರು. ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಈ ರೀತಿ ಮಹಿಳೆಯರು ಬೀದಿಗಿಳಿದಿರುವುದು. ಸಿಂಧನೂರಿನಲ್ಲಿ ಇದು ಪ್ರಥಮ ಬಾರಿ. ಮಹಿಳೆಯರ ಧೈರ್ಯದ ಈ ಚಳುವಳಿ ಜನಜಾಗೃತಿ ಉಂಟುಮಾಡುವುದರಲ್ಲಿ ಯಶಸ್ವಿಯಾಗಿದೆ. ಮಹಿಳಾ ಸಂಘಟನೆಯ ಸಂಚಾಲಕಿ ಗಿರಿಜಾಕಿಲ್ಲೇದ ಅವರು ಈ ಚಳುವಳಿಯ ನೇತೃತ್ವ ವಹಿಸಿದ್ದಾರೆ. ರಾಜ್ಯಾದ್ಯಂತ ಇಂಥ ಚಳುವಳಿ ನಡೆದು ಹಿಂದುಳಿದ ಮಹಿಳೆಯರಲ್ಲಿ ಹೊಸ ಜಾಗೃತಿ ಉಂಟುಮಾಡಲಿ.

ನಿರುದ್ಯೋಗಿ ಜನರ ಸಮಾವೇಶ

ರಾಜೀವ ಗಾಂಧಿಯವರ ಆರ್ಥಿಕ ನೀತಿಯಿಂದಾಗಿ ದೇಶದಲ್ಲಿ ನಿರುದ್ಯೋಗಿಗಳ ಸೈನ್ಯ ಯೋಜನೆಯಿಂದ ಯೋಜನೆಗೆ ಹೆಚ್ಚಾಗುತ್ತ ಬೆಳೆದಿದೆಂದೂ, ಅದರ ಬೆನ್ನ ಹಿಂದೆ ಬಡತನ ಅಧಿಕವಾಗುತ್ತಿದೆಂದೂ, ಕಾಂಗ್ರೆಸ ಸರಕಾರ ವಿದೇಶಿ ಗುತ್ತೇದಾರಂಗಳಿಗೆ ಸಹಾಯ ನೀಡುವ ಧೋರಣೆ ಅನುಸರಿಸುತ್ತಿರುವುದರಿಂದ ನಮ್ಮ ದೇಶದ ಜನ ಬಡತನ ರೇಖೆಯಿಂದ ಮೇಲಕ್ಕೇಳಲು ಸಾಧ್ಯವಾಗುತ್ತಿಲೆಂದೂ ಕಾರಣ ಬಂಡವಾಳಶಾಹಿ—ಭೂಮಾಲಕ ಸರಕಾರದ ವಿರುದ್ಧ ಯುವಕರು ಧೀರ ಹೋರಾಟ ನಡೆಸಬೇಕೆಂದೂ ಸಿ. ಐ. ಟಿ. ಯು ಅಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್ ಅವರು ತಾ|| 12 ರಂದು ದಾಂಡೇಲಿಯಲ್ಲಿ ಸಮಾವೇಶಗೊಂಡ ನಿರುದ್ಯೋಗಿ ಜನರನ್ನುದ್ದೇಶಿಸಿ ಕರೆ ನೀಡಿದರು. ಕಾರ್ಮಿಕ ಮುಖಂಡರಾದ ವಿ.ಜೆ.ಕೆ. ನಾಯರ್ ಬಂಡವಳಶಾಹಿ ಮತ್ತು ಸಮಾಜವಾದಿ ದೇಶಗಳಲ್ಲಿಯ ಆರ್ಥಿಕ ನೀತಿಯನ್ನು ವಿವರಿಸಿ ಕಾರ್ಮಿಕ ವರ್ಗದ ಅಧಿಕಾರ ಸ್ಥಾಪನೆಯಾಗದೆ ನಿರುದ್ಯೋಗ ಸಮಸ್ಯೆ ಬಗೆ ಹರಿಯಲಾರದೆಂದು ಎಚ್ಚರಿಸಿದರು. ಸಮತಾವಾದಿ ದೇಶಗಳಲ್ಲಿ ದುಡಿಯುವ ಹಕ್ಕು ಮೂಲಭೂತ ಹಕ್ಕಾಗಿದೆ. ಭಾರತದ ಸಂವಿಧಾನದಲ್ಲಿಯೂ ಕೆಲಸದ ಹಕ್ಕು ಮೂಲಭೂತ ಹಕ್ಕಾಗಬೇಕೆಂದೂ, ನೌಕರಿ ಲಭ್ಯವಾಗುವವರೆಗೆ ನಿರುದ್ಯೋಗಿಗಳಿಗೆ ಪರಿಹಾರ ಸಿಗಬೇಕೆಂಬ ಬೇಡಿಕೆಗಳ ಸಲುವಾಗಿ ನಿರಂತರ ಹೋರಾಡಬೇಕೆಂದು ಸಿ.ಐ.ಟಿ.ಯು ಕರೆ ಕೊಟ್ಟಿದೆಂದೂ ಹೇಳಿದರು.

ಟಿ. ಎಸ್. ನ್ಯಾಕ್ ಸಭಾಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಉಮೇಶ ನಾಯ್ಕ ಮತ್ತು ಎಂ.ಟಿ. ಕಟ್ಟಿಯವರು ಭಾಷಣ ಮಾಡಿ ನಿರುದ್ಯೋಗಿಗಳ ಹೋರಾಟದ ಮಹತ್ವ ತಿಳಿಸಿ ಹೇಳಿ, ಕಂಪ್ಯೂಟರೀಕರಣ, ಆಧುನೀಕರಣಗಳಿಂದಾಗುತ್ತಿರುವ ಅಪಾಯವನ್ನು ವಿವರಿಸಿ ನಿರುದ್ಯೋಗಿಗಳ ಹೋರಾಟಕ್ಕೆ ಸಂಘಟಿತ ಕಾರ್ಮಿಕ ವರ್ಗ ಸಂಪೂರ್ಣ ಬೆಂಬಲ ನೀಡುತ್ತದೆಂಬ ಆಶ್ವಾಸನೆ ನೀಡಿದರು.

ವಿಜೃಂಭಣೆಯ ಮೇ ಶತಮಾನೋತ್ಸವ ದಿನಾಚರಣೆ

ಮೈಸೂರು

ಮೈಸೂರಿನಲ್ಲಿ ಮೇ ದಿನಾಚರಣೆಯನ್ನು ಮೇ 1 ರಿಂದ 7 ರ ವರೆಗೆ ನಾನಾ ಪ್ರದೇಶಗಳಲ್ಲಿ ಆಚರಿಸಲಾಯಿತು. ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ, ಜೀವವಿಮೆ, ಪಿ.ಎನ್.ಟಿ. ಇರಾನ್-ಪ್ಯಾಲೆಸ್ಟಾಯನ್ ವಿದ್ಯಾರ್ಥಿಗಳು, ಎಸ್.ಎಫ್.ಐ, ಡಿ.ವೈ.ಎಫ್.ಐ ಕಾರ್ಯಕರ್ತರೆಲ್ಲ ವರ್ಣರಂಜಿತ ಮೆರವಣಿಗೆಯಲ್ಲಿ ಯುದ್ಧ ಕೋರ ರೇಗನ್ ಪ್ರತಿಮೆಯನ್ನು ಕೊಂಡೊಯ್ದು ಸುಟ್ಟು ಹಾಕಿದರು. ಸಂಜೆ ಎಂ. ಎಸ್. ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಬೃಹತ್ ಸಭೆ ನಡೆದು ಮೋಹನ ಕುಮಾರ, ವೆಂಕಟರಾಮಯ್ಯ, ಬಿ.ಸಿ. ಅಣ್ಣಪ್ಪ ಮೊದಲಾದವರು ಭಾಷಣ ಮಾಡಿದರು. 2 ರಿಂದ 4 ರ ವರೆಗೆ ಡಿ.ವೈ.ಎಫ್.ಐನ ಚಿದಾನಂದ ತೆಗ್ಗಿಹಳ್ಳಿಯವರ ಎರಡು ಮಹಾ ಯುದ್ಧಗಳು ಮತ್ತು ವಿಶ್ವಶಾಂತಿ ಹಾಗೂ, ಇರಾನ್ - ಪ್ಯಾಲೆಸ್ಟಾಯಿನ್ ಹೋರಾಟಗಳ ಬಗ್ಗೆ ಚಿತ್ರ ಪ್ರದರ್ಶನ, ಸಾಹಿತ್ಯ ಮಾರಾಟ ನಡೆಸಲಾಯಿತು. ಸಾರ್ವಜನಿಕರಿಂದ ಅದು ಹೆಚ್ಚಿನ ಪ್ರಶಂಸೆ ಪಡೆಯಿತು. ತಾ 3 ರಂದು ಗಾಂಧಿ ನಗರದಲ್ಲಿ ಸಾರ್ವಜನಿಕ ಸಭೆ ನಡೆಯಿತು. ತಾ 7 ರಂದು ಮುಕ್ತಾಯ ಸಮಾರಂಭದ ಅಂಗವಾಗಿ ಪುರ ಭವನದಲ್ಲಿ ಸಾರ್ವಜನಿಕ ಸಭೆ ನಡೆದು ಸಮುದಾಯ ತಂಡದಿಂದ "ದೀಪ" ಎಂಬ ನಾಟಕ ಪ್ರದರ್ಶನ, ಹಾಗೂ ಇರಾನ್ - ಪ್ಯಾಲೆಸ್ಟಾಯಿನ ಜನತೆಯ ಹೋರಾಟದ ಕುರಿತು "ಡೌನ್ ವಿದ್ ಇಂಪೀರಿಯಲಿಸಂ" "ರಿಟರ್ನ್ ಟು ಹೈಫ್" ಎಂಬ ಚಲನ ಚಿತ್ರ ಪ್ರದರ್ಶಿಸಲಾಯಿತು. ಮೇ ದಿನಾಚರಣೆ ನಿಮಿತ್ತ ಇಡೀ ಮೈಸೂರು ನಗರದ ತುಂಬೆಲ್ಲ ಕೆಂಬಾವುಟ ರಾರಾಜಿಸಿತ್ತು.

ಬೆಳ್ತಂಗಡಿ

ದ. ಕ. ಜಿಲ್ಲೆಯ ಬೆಳ್ತಂಗಡಿ ತಾಲೂಕು, ಹಿಂದೆ ಉಳಿದಿದ್ದು ಇತ್ತೀಚಿಗೆ ಅಲ್ಲಿ ರೈತ ಸಂಘ, ಬೀಡಿ ಕಾರ್ಮಿಕರ ಚಳುವಳಿ ಬೆಳೆದು ಬರುತ್ತಿದೆ. ಆ ರೀತಿಯ ಬೆಳವಣಿಗೆಯಿಂದಾಗಿ ತಾಲೂಕಿನ ಹಲವಾರು ಕಡೆ ಮೇ ದಿನದ ಶತಮಾನೋತ್ಸವ ಉತ್ತಮ ರೀತಿಯಲ್ಲಿ ನಡೆದು ಕಾರ್ಮಿಕ ಹೋರಾಟದ, ಅವರ ಸುಲಿಗೆಯ, ಅದಕ್ಕೆಲ್ಲ ಪರಿಹಾರವಾಗಿ ಹೊಸ ಸಮಾಜ ನಿರ್ಮಾಣದ ಕುರಿತು ಹೊಸ ವಿಚಾರ ಪ್ರತಿಗ್ರಾಮದ ಜನರಲ್ಲಿ ಮೂಡಿಬರಲಿಕ್ಕೆ ಪ್ರಯತ್ನ ನಡೆದ ಫಲವಾಗಿ ಗ್ರಾಮಾಂತರ ಜನರು ಮೇದಿನಾಚರಣೆ ಯಶಸ್ವಿಗೊಳಿಸಲು ಸಾಧ್ಯವಾಗಿದೆ. ಬೆಳ್ತಂಗಡಿ ತಾಲೂಕಿನ ಕಳಂಜ, ಪುದುವೆಟ್ಟು; ಮೊದಲಾದ ಕಡೆಗಳಲ್ಲಿ ಕೆಂಪುಧ್ವಜಗಳಿಂದ ಅಲಂಕರಿಸಲ್ಪಟ್ಟು ಮುಂಜಾನೆ ಧ್ವಜಾರೋಹಣ ಸಂಜೆ ಸಾರ್ವಜನಿಕ ಸಭೆಗಳು ನಡೆದವು. ಮಹಿಳೆಯರೂ, ಮಕ್ಕಳು ಈ ಕಾರ್ಯಕ್ರಮಗಳಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ರೈತ ಸಂಘದ ಲಕ್ಷ್ಮಣಗೌಡ, ಪುದುವೆಟ್ಟು, ಗ್ರಾಮದ ರೈತ ಮುಖಂಡ ಜೋಸೆಫ್ ಮೊದಲಾದವರು ಭಾಷಣ ಮಾಡಿದರು. ಪುದುವೆಟ್ಟು ಗ್ರಾಮದಲ್ಲಿ ಧ್ವಜಾರೋಹಣವನ್ನು ಎ. ಲಕ್ಷ್ಮಣಗೌಡರು ನೆರವೇರಿಸಿದರು ಸಾರ್ವಜನಿಕ ಸಭೆಯೂ ನಡೆಯಿತು. ಬೀಡಿ ಕೆಲಸ ಮಾಡುವ ಮಹಿಳೆಯರೂ, ಕೃಷಿ ಕಾರ್ಮಿಕರೂ ಬಡರೈತರೂ ಮೇ ದಿನಾಚರಣೆಯಲ್ಲಿ ಭಾಗವಹಿಸುತ್ತಿರುವುದು ಶುಭ ಲಕ್ಷಣ. ಅವರನ್ನು ರಾಜಕೀಯವಾಗಿ ಪರಿವರ್ತಿಸಲು ಮುಂದಿನ ಹೋರಾಟಕ್ಕೆ ಅಣಿಗೊಳಿಸಲು ಒಳ್ಳೆ ಸುಸಂಧಿಯಾಗಿದೆ.

ಕುಷ್ಟಗಿ

ದಿನಾಂಕ 1-6-86 ರಂದು ಕ ಪ್ರಾ. ರೈತ ಸಂಘ ಕುಷ್ಟಗಿ ತಾಲುಕು ಘಟಕವು ತನ್ನ ಕಾರ್ಯಾಲಯದ ಮುಂದೆ ವಿಶ್ವಕಾರ್ಮಿಕರ ಮೇ ದಿನಾಚರಣೆಯ ಅಂಗವಾಗಿ ಧ್ವಜಾರೋಹಣ ಮಾಡಿತು.

ಧ್ವಜಾರೋಹಣವನ್ನು, ತಾಲುಕು ಕಾರ್ಯದರ್ಶಿಗಳಾದ ಆರ್ ಕೆ. ದೇಸಾಯಿಯವರು ಮಾಡಿದರು. ಕಾರ್ಯಕರ್ತರ ಸಭೆಯನ್ನು ಉದ್ದೇಶಿಸಿ ಗಂಗಾಧರ ಕುಷ್ಟಗಿ ಮೇ ದಿನಾಚರಣೆಯ ಚಾರಿತ್ರಿಕ ಹಿನ್ನೆಲೆಯನ್ನು ಮತ್ತು ಸಾಮ್ರಾಜ್ಯಶಾಹಿ ಕಾಲ ಘಟ್ಟಕದಲ್ಲಿ ಅದರ ಪ್ರಾಮುಖ್ಯತೆಯನ್ನು ವಿವರಿಸಿ ಹೇಳಿದರು. ವಿರುಪಾಕ್ಷಯ್ಯ ಕುಷ್ಟಗಿ ವಂದಿಸಿದರು.

ಆ ನಂತರದಲ್ಲಿ ಸಂಘದ ಪದಾಧಿಕಾರಿಗಳ ಮತ್ತು ಕಾರ್ಯಕರ್ತರ ಮನೆಗಳ ಮುಂದೆ ಧ್ವಜಾರೋಹಣ ಕಾರ್ಯಕ್ರಮಗಳು ನಡೆದವು.

ಈ ಸಂದರ್ಭ ಸಿ. ಐ. ಟಿ. ಯು ಸಂಘಟನೆಯು ಕೊಟ್ಟ ಕರೆಯ ಮೇರೆಗೆ ವಿಶ್ವಶಾಂತಿ ಮತ್ತು ಉದ್ಯೋಗದ ಹಕ್ಕು ಈ ವಿಷಯವಾಗಿ ವಿಚಾರ ಸಂಕೀರಣ ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ನಡೆಸುವಂತೆ ತೀರ್ಮಾನ ಕೈಗೊಳ್ಳಲಾಯಿತು ಎಂದು ಕಳಕಪ್ಪ ನಾಯಕೊಡಿ ತಿಳಿಸಿದ್ದಾರೆ.

ಅಕ್ಕಿಆಲೂರು

ಧಾರವಾಡ ಜಿಲ್ಲೆಯ ಅಕ್ಕಿಆಲೂರಿನಲ್ಲಿ ರೈತರೂ, ಕೃಷಿ ಕಾರ್ಮಿಕರು ನೂರಾರು ಕೆಂಪು ಬಾವುಟಮೊಂದಿಗೆ ಮೆರವಣಿಗೆ ತೆಗೆದು ಸಂಜೆ ಎಂ. ಸಿ. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಉತ್ಸಾಹದಿಂದ ಮೇ ಶತಮಾನೋತ್ಸವವನ್ನು ಆಚರಿಸಿದರು. ಮಲ್ಲಣ್ಣ ಗಡಿಯಣ್ಣವರ, ನಾಗಪ್ಪ ಕ್ಷೌರದ, ಫಕೀರಪ್ಪ ಹೋತನಳ್ಳಿ ಮೊದಲಾದವರು ಭಾಷಣ ಮಾಡಿ ಮೇ ದಿನದ ಮಹತ್ವ ತಿಳಿಸಿ ಹೇಳಿ ರೈತರು, ಕೃಷಿಕಾರ್ಮಿಕರು ಸುಲಿಗೆಗೊಳಗಾಗಿರುವ ಎಲ್ಲಾ ಜನರೂ ಸಂಘಟಿತರಾಗಿ ಹೊಸ ಸಮಾಜ ನಿರ್ಮಾಣಕ್ಕಾಗಿ ದುಡಿಯಬೇಕೆಂದು ಕರೆ ನೀಡಿದರು.

ಸಿರಸಿ

ಕೆ. ಡಿ. ಸಿ. ಸಿ. ಕೆ. ಎಸ್. ಆರ್. ಟಿ. ಸಿ. ಜೀವವಿಮೆ, ಮುಳುಗುಂದ ಔದ್ಯೋಗಿಕ ಸಂಘದ ನೌಕರರೂ ಕಾರ್ಮಿಕರೆಲ್ಲ ಸೇರಿ ಮೆರವಣಿಗೆ ತೆಗೆದು ಸಾರ್ವಜನಿಕ ಸಭೆ ನಡೆಸಿ ಮೇ ದಿನಾಚರಣೆಯನ್ನು ವಿಜೃಂಭಣೆಯಿಂದ ನಡೆಸಿದರು. ಶಿರಸಿ ಬ್ಯಾಂಕ್ ನೌಕರರ ಸಂಘದ ಆನಂದ ಹೆಗಡೆಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಎಂ. ಎಸ್. ಧಾರೇಶ್ವರ, ಎ. ಜಿ. ಮಾಶಾಲ್ಕಿ, ಬಂಗಾರೇಶ್ವರ, ಎಸ್. ಎಂ. ಹೆಗಡೆ ಮೊದಲಾದವರು ಭಾಷಣ ಮಾಡಿದರು.

ತಿಪಟೂರು

ತಿಪಟೂರಿನಲ್ಲಿ ಮೇ ಶತಮಾನೋತ್ಸವ 9-5-86 ರಂದು ಡೋಂಗ್ರಿಯವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಸಿ. ಪಿ. ಐ. (ಎಂ) ಮುಖಂಡರಾದ ಕೆ. ಆರ್. ನಾಯಕ ಅವರು ಮಾತನಾಡುತ್ತ ಆಳುವ ವರ್ಗ ವರ್ಣ ಪ್ರಶ್ನೆಯನ್ನೆತ್ತಿ ಕಾರ್ಮಿಕರಲ್ಲಿ ಹೇಗೆ ಒಡಕುಂಟು ಮಾಡುತ್ತಿದೆಂಬುದನ್ನು ವಿವರಿಸಿ, ಕೆಲಸಗಾರರು ವರ್ಗ ಜಾಗೃತಿ ಹೆಚ್ಚಿಸಿಕೊಂಡು ಶೋಷಣೆಯ ವಿರುದ್ಧ ಹೋರಾಡಬೇಕೆಂದರು. ಬಿ. ಡಿ. ರಾಮಯ್ಯನವರು ಮೇ ದಿನದ ಮಹತ್ವ ತಿಳಿಸಿ ಹೇಳಿದರು. ಸೇವಕ ಪತ್ರಿಕೆಯ ಜಯರಾಂ, ಓಬೇಗೌಡ ಮೊದಲಾದವರೆಲ್ಲ ಭಾಷಣ ಮಾಡಿ ಯುದ್ಧದ ಸಿದ್ಧತೆಯನ್ನೂ, ಅದನ್ನು ವಿರೋಧಿಸಲು ಜನಜಾಗೃತಿಯ ಅವಶ್ಯಕತೆಯನ್ನು ವಿವರಿಸಿದರು.

ಹುಣಸೂರು

ವುಲನ್, ಪ್ಲ್ಯಾವುಡ ಕಾರ್ಮಿಕರು, ರೈತರು, ಯುವಕರು; ವಿದ್ಯಾರ್ಥಿಗಳು ಸೇರಿ ಮೆರವಣಿಗೆ ತೆಗೆದು, ಕೊನೆಯಲ್ಲಿ ನಡೆದ ಸಭೆಯಲ್ಲಿ ಎ.ಎಸ್.ಉಗ್ರಪ್ಪ, ಮೋಹನಕುಮಾರ, ಕಾಳಶೆಟ್ಟಿ, ಬಿ. ಸಿ. ಅಣ್ಣಪ್ಪ ಮೊದಲಾದವರು ಭಾಷಣ ಮಾಡಿದರು. ಬಸವರಾಜ ಸ್ವಾಗತಿಸಿದರು. ರಾಜು ವಂದನಾರ್ಪಣೆ ಸಲ್ಲಿಸಿದರು.

ಚಾಮರಾಜ ನಗರ

ಬೀಡಿ ಕಾರ್ಮಿಕರು, ಹಮಾಲರು ಸೇರಿ ಮೆರವಣಿಗೆ ನಡೆಸಿ, ಬಹಿರಂಗ ಸಭೆ ಮೂಲಕ ಮೇ ದಿನ ಆಚರಿಸಿದರು ಮೋಹನಕುಮಾರ, ಉಗ್ರಪ್ಪ, ನಂಜಯ್ಯನವರು ಮೊದಲಾದವರು ಭಾಷಣ ಮಾಡಿದರು.

———

ಉಡುಪಿ ಬೀಡಿ ಕಾರ್ಮಿಕರ ವಿಜಯ

9 ವರ್ಷದಿಂದ ಕಡಿತ ಮಾಡಿದ ಪ್ರಾವಿಡೆಂಟ್ ಫಂಡಿನ ರಶೀದಿ ಕೊಡಬೇಕು. ಎಲ್ಲಾ ಕಾರ್ಮಿಕರಿಗೆ ಲೋಗ ಪುಸ್ತಕ ಕೊಟ್ಟು ದಿನದಲ್ಲಿ ತಯಾರಾದ ಬೀಡಿಯನ್ನು ಬರೆಯಬೇಕು. ಕಾನೂನು ಪ್ರಕಾರ ಎಲ್ಲಾ ಸೌಲಭ್ಯಗಳು ಸಿಗಬೇಕು ಎಂಬ ಇತ್ಯಾದಿ ಬೇಡಿಕೆಗಳಿಗಾಗಿ 8-6-86 ರಂದು ಉಡುಪಿ ತಾಲೂಕಿನ ಸಾವಿರಾರು ಬೀಡಿ ಕಟ್ಟುವ ಮಹಿಳೆಯರು ಮತಪ್ರದರ್ಶನ ನಡೆಸಿದರು ಮಾತನಾಡಲು ತಯಾರಾಗಿದ್ದರಿಂದ ಬೀಡಿ ಕಾರ್ಮಿಕರು ಹೋರಾಟವನ್ನು ತೀವ್ರಗೊಳಿಸಿ ಸೌತ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್ ಕಾರ್ಯದರ್ಶಿ ಯು. ಪಿ. ಲೋಕಯ್ಯ ನೇತೃತ್ವದಲ್ಲಿ ಅನಿರ್ಧಿಷ್ಟ ಅನ್ನ ಸತ್ಯಾಗ್ರಹ ಪ್ರಾರಂಭಿಸಿದರು. 12-5-86 ರಂದು ಮಂಗಳೂರು ಪ್ರಾವಿಡೆಂಟ್ ಫಂಡಿನ ಅಧಿಕಾರಿಗಳ ಸಮ್ಮುಖದಲ್ಲಿ ಮಾಲಿಕರು ಕಾರ್ಮಿಕ ಪ್ರತಿನಿಧಿಗಳು ಹಾಜರಿದ್ದು ತೀರ್ಮಾನಕ್ಕೆ ಬರಲಾಯಿತು. ಆ ಪ್ರಕಾರ ತಾ. 2೭-5-86 ರಂದು ಉಡುಪಿ ಹೋಂ ಇಂಡಸ್ಟ್ರೀಸ್‌ನ ಎಲ್ಲಾಕಾರ್ಮಿಕರಿಗೂ ಉಡುಪಿ ಭಾರತ ಬೀಡಿ ಕಾರ್ಮಿಕರ 1978, 79 ರ ಪ್ರಾವಿಡೆಂಟ್ ಫಂಡಿನ ರಶೀದಿ ಕೊಡುವುದಾಗಿಯೂ; ಭಾರತ ಬೀಡಿಯ 1979, 80ರ ರಶೀಧಿ ಜೂನ ತಿಂಗಳಲ್ಲಿ ಕೊಡುವುದಾಗಿ ಬರದ ಮೂಲಕ ಒಪ್ಪಿಗೆಯಾಯಿತು. ಕಾರ್ಮಿಕರಿಗೆ ಅದರ ಎಲ್ಲಾ ರೀತಿಯ ಅನ್ಯಾಯವನ್ನು ತನಿಕೆ ಮಾಡಿ ಲೋಗ ಪುಸ್ತಕ ಕಾರ್ಮಿಕರ ಕೈಯಲ್ಲಿ ಕೊಡುವುದಾಗಿ ಬೀಡಿ ಮಾಲಕರು ಭರವಸೆ ನೀಡಿದ ಕಾರಣ ಸತ್ಯಾಗ್ರಹ ಮುಕ್ತಾಯಗೊಳಿಸಲಾಯಿತು. ಅಲ್ಲಿ ನೆರೆದ ಕಾರ್ಮಿಕರನ್ನು ಉದ್ದೇಶಿಸಿ ಡೇವಿಡ್ ಅರ್ಕಜೆ, ಜೆ. ಬಾಲಕೃಷ್ಣ ಶೆಟ್ಟಿ, ಯು. ಪಿ. ಲೋಕಯ್ಯ ಮಾತನಾಡಿದರು. ಸಾಧು ಅಮೀನ ಧನ್ಯವಾದ ಕೊಟ್ಟರು. ಹೋರಾಟದಿಂದಾಗಿ ಗಳಿಸಿದ ಈ ವಿಜಯ ಬೀಡಿ ಕಾರ್ಮಿಕರಲ್ಲಿ ಹೊಸಸ್ಫೂರ್ತಿ ತಂದಿದೆ.

ಬೆಲೆಯೇರಿಕೆಯಾಗುತ್ತಿಲ್ಲ ಎನ್ನುವವರಿಗೆ.... ....

ರೂ. ೨೬೪೩ ಕೋಟಿ ತುಟ್ಟಿಭತ್ತೆ ಹೆಚ್ಚಳ

ಆರನೇ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿ (1980-85) ಕೇಂದ್ರ ಸರಕಾರಿ ನೌಕರರಿಗೆ ಕಾಲ ಕಾಲಕ್ಕೆ ಕೊಡ ಮಾಡಿದ ತುಟ್ಟಿ ಭತ್ತೆ ಹಾಗೂ ತಾತ್ಪೂರ್ತಿಕ ಪರಿಹಾರದ ಹೆಚ್ಚಳದಿಂದಾಗಿ ದೇಶದ ಖಜಾನೆಗೆ ರೂ 2643 ಕೋಟಿಯ ಭಾರಬಿದ್ದಿದೆ. ಈ ಕಾಲ ಘಟ್ಟದಲ್ಲಿ ಕೇಂದ್ರ ಸರಕಾರ 28 ತುಟ್ಟಿ ಭತ್ತೆ ಕಂತುಗಳನ್ನು, ಎರಡು ತಾತ್ಪೂರ್ತಿಕ ಪರಿಹಾರಗಳನ್ನು ಕೊಟ್ಟಿದೆ 1983-84 ಒಂದೇ ವರ್ಷದಲ್ಲಿ 7 ಕಂತು ತುಟ್ಟಿ ಭತ್ತೆ ಕೊಡಬೇಕಾಯಿತು.

ದಿನ ನಿತ್ಯದ ವಸ್ತುಗಳ ಬೆಲೆ ಹೆಚ್ಚಾದಂತೆ ತುಟ್ಟಿ ಭತ್ತೆಯನ್ನೂ ಏರಿಸಬೇಕಾಗುತ್ತದೆ. ಬೆಲೆ ಹೆಚ್ಚಳವಿಲ್ಲೆಂಬ ಕೇಂದ್ರ ಆರ್ಥಿಕ ಮಂತ್ರಿಯವರ ಹೇಳಿಕೆಯನ್ನು ಮೇಲಿನ ಅಂಕೆ ಸಂಖ್ಯೆ ಅಲ್ಲಗಳೆಯುತ್ತದೆ. ಕಾಂಗ್ರೆ ಸರಕಾರದ ಆರ್ಥಿಕ ನೀತಿಯಿಂದಾಗಿ ದಿನ ಬಳಕೆಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆಂಬ ಸಿಪಿಐ(ಎಂ), ಸಿ.ಐ.ಟಿ.ಯು ವಾದವನ್ನು ಇದು ಸಮರ್ಥಿಸುತ್ತದೆ.

ಕುಷ್ಟಗಿ ತಾಲ್ಲೂಕ ರೈತರ ಮೇಲೆ ಪೋಲೀಸರ ದೌರ್ಜನ್ಯ

ಮುಗ್ಧ ರೈತರ ಮೇಲೆ ಪೋಲೀಸರ ದೌರ್ಜನ್ಯ, ಬರಗಾಲಕ್ಕೀಡಾದ ಕುಷ್ಟಗಿ ತಾಲ್ಲೂಕಿನ ರೈತರಿಗೆ ಪರಿಹಾರ ಒದಗಿಸುವ ಸಲುವಾಗಿ ಹಲವಾರು ಮನವಿ ಸಲ್ಲಿಕೆ, ಹೋರಾಟಗಳು ನಡೆದರೂ ಕೂಡ ಸರಕಾರ ಕಣ್ಣು ಮುಚ್ಚಿಕೂತ ಕಾರಣ ಮೇ 12 ರಂದು ರೈತ ಸಂಘದ ವತಿಯಿಂದ ತಹಶೀಲದಾರ ಕಚೇರಿಯನ್ನು ರೈತರು ಘೇರಾವೋ ಮಾಡಿದರು. ಗೇಟಿನೆದುರು ಮಲಗಿದ್ದರು. ಪೋಲೀಸರು ಆ ರೈತರ ಮೇಲೆ ಲಾಠಿಚಾರ್ಜ್ ಮಾಡಿ, ಹೊಡೆದು ಅವರನ್ನೆಲ್ಲ ಬಂಧಿಸಿ ಕತ್ತಲೆ ಕೋಣೆಯಂತಿರುವ ಜೈಲಿನಲ್ಲಿ ಹಾಕಿ ಮನಬಂದಂತೆ ಬೈದರು. ಆರ್. ಕೆ. ದೇಸಾಯಿ ಮತ್ತು ಸಿಳ್ಳ್ಯಾರು ಇವರಿಗೆ ತೀವ್ರವಾದ ಪೆಟ್ಟುಗಳಾಗಿವೆ. ಹನಮಪ್ಪ ಟಕ್ಕಳಕಿ ಎಂಬವನ ಬೆರಳಿಗೆ ತೀವ್ರ ಗಾಯವಾಗಿ ಕನ್ನಡಕ (ಚಾಳೀಸು) ಪುಡಿಯಾಗಿದೆ. ಜೈಲಿನಲ್ಲಿ ಇವರಿಗೆಲ್ಲ ಡಾಕ್ಟರರು ಉಪಚಾರ ನೀಡಲಿಲ್ಲ. ನೀರಿನ ವ್ಯವಸ್ಥೆ ಕೂಡ ಇರಲಿಲ್ಲ.

ಜನತಾ ಸರಕಾರದಲ್ಲೂ ಪೋಲೀಸರಿಂದ ಈ ರೀತಿ ಅತ್ಯಾಚಾರ ನಡೆಯುತ್ತಿರುವುದನ್ನು ರೈತ ಸಂಘ ಖಂಡಿಸಿ, ರೈತರ ಬೇಡಿಕೆಗಳನ್ನು ಕೂಡಲೇ ಮಂಜೂರು ಮಾಡಬೇಕೆಂದು ಮೇಲಧಿಕಾರಿಗಳನ್ನು ಒತ್ತಾಯ ಪಡಿಸಿದೆ.

ಕುಷ್ಟಗಿಯಲ್ಲಿ ರೈತರ ಮೇಲಾದ ದಬ್ಬಾಳಿಕೆಯನ್ನು ಪ್ರಾಂತ ರೈತ ಸಂಘ ಬಲವಾಗಿ ಖಂಡಿಸುತ್ತದೆ.

ಮೇ ದಿನ ಮತ್ತು ಭಾರತದಲ್ಲಿ

ಎಂಟು ಗಂಟೆ ಕೆಲಸದ ದಿನಕ್ಕೆ ಹೋರಾಟ

ಡಾ|| ಎಂ. ಕೆ. ಫಂದೆ

ಜಗತ್ತಿನಾದ್ಯಂತ ಈ ವರ್ಷದ ಮೇ ದಿನವನ್ನು ಕಾರ್ಮಿಕ ವರ್ಗ, 8 ಗಂಟೆಗಳ ಕೆಲಸದ ದಿನದ ಬೇಡಿಕೆಗೆ ಮತ್ತು ಬಂಡವಾಳಶಾಹಿ ವರ್ಗದ ಶೋಷಣೆಯ ವಿರುದ್ಧ ಹೋರಾಡಿ ಚಿಕಾಗೋ ಕಾರ್ಮಿಕರು ಹುತಾತ್ಮರಾದ ದಿನದ ಶತಮಾನೋತ್ಸವವನ್ನು ಆಚರಿಸುವುದು. 1889 ರಲ್ಲಿ ಪ್ಯಾರಿಸ್‌ನಲ್ಲಿ ಸೇರಿದ್ದ ಎರಡನೇ ಅಂತರ್ರಾಷ್ಟ್ರೀಯ ಮೇ ದಿನವನ್ನು ಅಂತರ್ರಾಷ್ಟ್ರೀಯ ಕಾರ್ಮಿಕರ ದಿನವಾಗಿ ಆಚರಿಸಲು ನಿರ್ಧರಿಸಿತು

ಮೇ ದಿನದ ಸಂದೇಶ ಭಾರತಕ್ಕೆ ಬಹಳ ತಡವಾಗಿಯೇ ತಲುಪಿತು. ದೇಶವ್ಯಾಪಿಯಾಗಿ 1927 ರಲ್ಲಿ ಮೊತ್ತಮೊದಲಬಾರಿಗೆ ಮೇ ದಿನ ಆಚರಿಸಲಾಯಿತು. ಈ ದಿನದಂದು ಹಲವೆಡೆ ಪ್ರದರ್ಶನ ಮತ್ತು ರ್‍ಯಾಲಿಗಳನ್ನು ಸಂಘಟಿಸಲಾಗಿದ್ದು, ಉಳಿದ ಕಾರ್ಮಿಕ ವರ್ಗದ ಬೇಡಿಕೆಗಳ ಜತೆಗೆ 8 ಗಂಟೆ ದಿನದ ಬೇಡಿಕೆಯನ್ನು ಮುಂದಿಡಲಾಯಿತು. ಭಾರತದಲ್ಲಿ ಮೊತ್ತ ಮೊದಲ ಈ ಮೇ ದಿನಾಚರಣೆಯನ್ನು ಕಾ|| ಆರ್. ಪಿ. ದತ್ ಭಾರತದ ಕಾರ್ಮಿಕ ಚಳುವಳಿ ಪ್ರಜ್ಞಾಪೂರ್ವಕವಾಗಿ ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ಭಾಗವಾದ ಹೊಸ ಯುಗದ ಪ್ರತೀಕ" ಎಂದು ಬಣ್ಣಿಸಿದ್ದಾರೆ. (ಇಂಡಿಯಾ ಟುಡೆ ಪು 384)

ಭಾರತದಲ್ಲಿ 8 ಗಂಟೆಗಳ ದಿನಕ್ಕಾಗಿ ಹೋರಾಟ ದೀರ್ಘ ಮತ್ತು ಕಷ್ಟಕರವಾಗಿತ್ತು. ತೀವ್ರ ಹೋರಾಟಗಳಿಂದ ಕೆಲಸದ ಗಂಟೆಗಳನ್ನು ಸ್ವಲ್ಪ ಸ್ವಲ್ಪವೇ ಕಡಿಮೆ ಮಾಡಲಾಯಿತು. ಆದರೆ 1200 ಹೌರಾ ರೈಲ್ವೆ ಕಾರ್ಮಿಕರು 1862 ಎಪ್ರಿಲ್ - ಮೇ ಯಷ್ಟು ಹಿಂದೆಯೇ 8 ಗಂಟೆ ದಿನದ ಬೇಡಿಕೆ ಮುಂದಿಟ್ಟು ಕೆಲವು ದಿನಗಳ ಮುಷ್ಕರ ಹೂಡಿದ್ದರೆಂದು ಕಾ|| ಸುಕೋಮಲಸೇ ಅವರು "ಭಾರತದಲ್ಲಿ ಕಾರ್ಮಿಕ ವರ್ಗ" ಎಂಬ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಕಾರ್ಖಾನೆ ಮತ್ತಿತರ ಸಂಸ್ಥೆಗಳ ಮೊದಲ ದಿನಗಳಲ್ಲಿ ಯಾವುದೇ ಮಿತಿ ಇಲ್ಲವಾದ್ದರಿಂದ ಕೆಲಸದ ಅವಧಿ ಕಡಿತದ ಬೇಡಿಕೆ ಸಾಮಾನ್ಯವಾಗಿತ್ತು. ವಾರದ ರಜೆ ಇಲ್ಲದೆ 14 ರಿಂದ 16 ಗಂಟೆಗಳು ಕೆಲಸ ಸರ್ವೆಸಾಮಾನ್ಯವಾಗಿತ್ತು. ಅಧಿಕೃತವಾದ ಊಟದ ಸಮಯ ಸಹ ಇರಲಿಲ್ಲ. ಕಾರ್ಮಿಕರು ತಮ್ಮ ಕೆಲಸ ಮಾಡುತ್ತಲೇ ಊಟ ಮಾಡಬೇಕಾಗಿತ್ತು.

ಭಾರತದಲ್ಲಿ ಈ ರೀತಿಯ ಅಗ್ಗದ ವಿಪರೀತ ಕೆಲಸದ ಅವಧಿಯಿಂದ ಬ್ರಿಟನ್‌ದ ಲಂಕೇಶಿಯರ್ ಮಿಲ್ ಒಡೆಯರು ಭಾರತದ ಮಿಲ್‌ಗಳೊಡನೆ ಪೈಪೋಟಿ ನಡೆಸುವುದು ದುಸ್ತರವಾಯಿತು. ಇದರಿಂದಾಗಿ ಭಾರತದ ಕಾರ್ಖಾನೆಗಳಲ್ಲಿ ಕಾರ್ಮಿಕರ ಶೋಚನೀಯ ದುಸ್ಥಿತಿ ಬಗ್ಗೆ ಲಂಕೆಶಯರ್‌ನ ಮಿಲ್ ಮಾಲಿಕರು ಗಲಾಟೆ ಎಬ್ಬಿಸಿದರು. ಭಾರತದ ಕಾರ್ಖಾನೆಗಳಲ್ಲಿ ಮಿತಿಯಿಲ್ಲದೆ ಕೆಲಸದ ಅವಧಿ ಬಗ್ಗೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲೂ ಪ್ರಶ್ನೆ ಎತ್ತಲಾಯಿತು. ಕಾರ್ಖಾನೆಗಳ ಆಯೋಗ 1884 ರಲ್ಲಿ ಕೆಲಸದ ಸ್ಥಿತಿಗಳ ಬಗ್ಗೆ ಅಧ್ಯಯನ ನಡೆಸಿ ಕೆಲಸದ ಅವಧಿಯ ಬಗ್ಗೆ ಸಹ ಗಮನ ಹರಿಸಿತು. ಈ ಆಯೋಗಕ್ಕೆ ಶ್ರೀ ಎನ್. ಎಂ. ಲೋಖಂಡೆ ನಾಯಕತ್ವದ ಮುಂಬಯಿ ಮಿಲ್-ಕಾರ್ಮಿಕರ ಎಸೋಸಿಯೆಷನ್ ಅರ್ಪಿಸಿದ ಮನವಿ ಪತ್ರದಲ್ಲಿ" ಮಿಲ್ ಕೆಲಸ 6-30 ಬೆಳಿಗ್ಗೆ ಆರಂಭವಾಗಿ ಸೂರ್ಯಾಸ್ತದೊಂದಿಗೆ ಮುಗಿಯಬೇಕು" ಎಂಬ ಬೇಡಿಕೆ ಸಲ್ಲಿಸಿತು. "ಮಧ್ಯಾಹ್ನ ಅರ್ಧ ಗಂಟೆಯ ವಿಶ್ರಾಂತಿ ಅವಧಿ ಇರಬೇಕು" ಎಂದು ಸಹ ಕೇಳಿತು.

1881ರಲ್ಲಿ ಜಾರಿಗೆ ಬಂದ ಮೊದಲನೆಯ ಕಾರ್ಖಾನೆಗಳ ಮಸೂದೆ, ಕೆಲಸದ ಅವಧಿ ಮೇಲೆ ಯಾವುದೇ ರೀತಿಯ ಮಿತಿ ಹೇರಲಿಲ್ಲ. ಈ ಮಸೂದೆ 7 ವರ್ಷಕ್ಕಿಂತ ಕೆಳಗಿನ ಮಕ್ಕಳ ದುಡಿತವನ್ನು ನಿಷೇಧಿಸಿತಷ್ಟೆ. ಆದರೂ ಮಕ್ಕಳ ಕೆಲಸದ ಅವಧಿಗೆ ಯಾವುದೇ ಮಿತಿ ಹೇರಲಿಲ್ಲ,

1891 ರ ಮಸೂದೆ 50 ಅಥವಾ ಹೆಚ್ಚಿನ ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆಗಳಿಗೆ ಮಾತ್ರ ಅನ್ವಯವಾಗುವಂತಿತ್ತು. ಕೆಲಸಕ್ಕೆ ತೆಗೆದುಕೊಳ್ಳಬಹುದಾದ ಮಕ್ಕಳ ವಯೋಮಿತಿಯನ್ನು 7 ರಿಂದ 9 ಕ್ಕೆ ಏರಿಸಲಾಯಿತು. ಕೆಲಸದ ಅವಧಿ ಮಿತಿಯನ್ನು ಮಕ್ಕಳಿಗೆ 9 ಗಂಟೆ ಮತ್ತು ಮಹಿಳೆಯರಿಗೆ 11 ಗಂಟೆ ಎಂದು ವಿಧಿಸಲಾಯಿತು. ಮಹಿಳೆಯ ರಾತ್ರಿ ಪಾಳಿ ದುಡಿತ ನಿಷೇಧಿಸಲಾಯಿತು. ಪುರುಷ ಕಾರ್ಮಿಕರಿಗೆ ಕೆಲಸದ ಅವಧಿ ಮಿತಿ ವಿಧಿಸದೆ, ಕೇವಲ ಅರ್ಧಗಂಟೆಯ ವಿಶ್ರಾಂತಿ ಅವಧಿ ನೀಡಿತು. 1895 ರಲ್ಲಿ ವಿದ್ಯುತ್‌ದೀಪಗಳು ಕಾರ್ಖಾನೆಯಲ್ಲಿ ಬಳಕೆಗೆ ಬಂದಾಗ ಕೆಲಸದ ಅವಧಿಯನ್ನು ಹೆಚ್ಚಿಸುವ ಪ್ರಯತ್ನಗಳು ನಡೆದು, ಇದರ ವಿರುದ್ಧ ಮುಷ್ಕರಗಳೂ ನಡೆದವು.

ಮಿತಿಮೀರಿದ ದುಡಿತಕ್ಕೆ ಪ್ರತಿರೋಧ

ಕೆಲಸದ ದುಸ್ಥಿತಿಯ ವಿರುದ್ಧ ಆಗಾಗ ಪ್ರದರ್ಶನಗಳು ಹರತಾಳ್ ಕೆಲಸ ಸ್ಥಗಿತ, ಯಂತ್ರಗಳ ನಾಶ ಅಥವಾ ದಬ್ಬಾಳಿಕೆಗಳನ್ನು ಹೊಡೆಯುವುದು-ಇವು ಸಂಘಟಿತ ಟ್ರೇಡ್ ಯೂನಿಯನ್ ಚಳುವಳಿಯ ಅಭಾವದಿಂದಾಗಿ ಪ್ರತಿರೋಧದ ಕೆಲವು ರೂಪಗಳಾಗಿದ್ದವು. ಕೆಲವು ಸಾಮಾಜಿಕ ಕಾರ್ಯಕರ್ತರು ಕಾರ್ಮಿಕರ ಸ್ಥಿತಿಗತಿಯ ಸುಧಾರಣೆಗೆ ಪ್ರಯತ್ನಪಟ್ಟರು

ಈ ಹೋರಾಟಗಳ ಫಲವಾಗಿ ಕಾರ್ಖಾನೆಗಳ ಮಸೂದೆಗೆ 1911ರಲ್ಲಿ ಪುರುಷ ಕಾರ್ಮಿಕರಿಗೆ ಕೆಲಸದ ಅವಧಿ ಪ್ರತಿ 12 ಗಂಟೆಗಳು ಮತ್ತು ಮಕ್ಕಳಿಗೆ 6 ಗಂಟೆ ವಿಧಿಸಿ ತಿದ್ದುಪಡಿಯಾಯಿತು. ಹಲವು ಕಾರ್ಖಾನೆಗಳು ಈ ಕಟ್ಟುಪಾಡುಗಳನ್ನು ಲಕ್ಷಕ್ಕೆ ತೆಗೆದುಗೊಳ್ಳಲಿಲ್ಲ. ಮಸೂದೆಯ ಉಲ್ಲಂಘನಕ್ಕೆ ತಕ್ಕ ದಂಡ ಮತ್ತು ಇದನ್ನು ಜಾರಿಗೆ ತರುವ ಸೂಕ್ತ ನಿರೀಕ್ಷಕ ಯಂತ್ರದ ಅಭಾವದಿಂದಾಗಿ ಇದು ಜಾರಿಗೆ ಬರಲಿಲ್ಲ.

ಮೊದಲನೆಯ ಮಹಾಯುದ್ಧದ ನಂತರ ಕೆಲಸದ ಅವಧಿ ಕಡಿತದ ಬೇಡಿಕೆಯೊಂದಿಗೆ ಹಲವು ಮುಷ್ಕರಗಳು ನಡೆದುವೆಂಬ ದಾಖಲೆ ಇದೆ. ಈ ಮುಷ್ಕರಗಳ ತೀವ್ರತೆ ಮತ್ತು ಹರವು ಒಂದು ಅಧಿಕೃತ ಪ್ರಕಾಶನದಲ್ಲಿ ಹೀಗೆ ದಾಖಲಾಗಿದೆ.

"ಹಿಂದೆ ಅನಿವಾರ್ಯ ಎಂದು ಪರಿಗಣಿಸಲಾಗಿದ್ದ ಸ್ಥಿತಿ-ಮುಖ್ಯವಾಗಿ ದೀರ್ಘ ಕೆಲಸದ ಅವಧಿ-ಅಸಹನೀಯವಾಗಿದೆ; ಪಾಶ್ಚಿಮಾತ್ಯ ದೇಶಗಳಲ್ಲಿರುವ ರೀತಿಯ ಟ್ರೇಡ್ ಯೂನಿಯನ್‌ಗಳು ಅಪರೂಪವಾದರೂ ಸಮಗ್ರ ಕಾರ್ಯಾಚರಣೆಯ ಮಹತ್ವ ಕಾರ್ಮಿಕರಿಗೆ ಅರ್ಥವಾಗಿದೆ. 1918-19 ಮತ್ತು ಮರುವರ್ಷದ ಚಳಿಗಾಲಗಳಲ್ಲಿ (ಇನ್ನೂ ಹೆಚ್ಚಿನ) ಪ್ರಮುಖ ಮುಷ್ಕರಗಳಲ್ಲಿ ಮತ್ತು ವ್ಯಾಪಕ ಕೈಗಾರಿಕಾ ಅಶಾಂತಿ ಉಂಟಾಯಿತು. ಈ ಅವಧಿಯ ಹೆಚ್ಚಿನ ದೊಡ್ಡ ಮುಷ್ಕರಗಳು 10 ಗಂಟೆ ಅವಧಿಯ ಬೇಡಿಕೆ ಈಡೇರಿಸುವ ಉದ್ದೇಶ ಹೊಂದಿದ್ದವು. ಈ ಮುಷ್ಕರಗಳು ಎಷ್ಟು ಯಶಸ್ವಿಯಾಗಿದ್ದವೆಂದರೆ 1922ರ ಮಸೂದೆ ವಿಧಿಸಿದ 60 ಗಂಟೆಗಳ ವಾರವನ್ನು ಹೆಚ್ಚು ಕಡಿಮೆ ಮಾಲಕರು ಆಗಲೇ ಒಪ್ಪಿಕೊಂಡಿದ್ದರು

(ಭಾರತದ ಕಾರ್ಖಾನೆಗಳು ಮತ್ತು ಕಾರ್ಮಿಕರ ಬಗ್ಗೆ ಬುಲೆಟಿನ್ ಸಂಖ್ಯೆ 43)

ಕೆಲಸದ ಅವಧಿಯಲ್ಲಿ ಹಂತ ಹಂತ ಕಡಿತ

1911ರ ಕಾರ್ಖಾನೆಗಳ ಮಸೂದೆಯಲ್ಲಿ ನಿಗದಿ ಪಡಿಸಿದ ಕೆಲಸದ ಅವಧಿಯ ಮಿತಿ ಜವಳಿ ಕೈಗಾರಿಕೆಗೆ ಮಾತ್ರ ಅನ್ವಯವಾಗಿತ್ತು. ಆದರೆ 1922ರ ಮಸೂದೆ ಎಲ್ಲಾ ಕೈಗಾರಿಕೆಗಳಿಗೂ ಅನ್ವಯವಾಗುತ್ತಿತ್ತು. ಈ ಮಧ್ಯದ ಅವಧಿಯಲ್ಲಿ ಕೆಲಸದ ಅವಧಿ ಕಡಿತದ ಚಳುವಳಿ ಈ ಮಸೂದೆ ಒಂದು ತಿದ್ದುಪಡಿ ಮೂಲಕ ವಿದ್ಯುತ್‌ಶಕ್ತಿ ಉಪಯೋಗಿಸುವ ಮತ್ತು 20ಕ್ಕಿಂತ ಹೆಚ್ಚು ಕಾರ್ಮಿಕರಿರುವ ಎಲ್ಲಾ ಕಾರ್ಖಾನೆಗಳಿಗೆ ವಿಸ್ತರಿಸಲಾಯಿತು. ಕೆಲಸದ ಅವಧಿ ಮಿತಿಯನ್ನು ದಿನಕ್ಕೆ 11 ಮತ್ತು ವಾರಕ್ಕೆ 60 ಗಂಟೆಗಳು ಎಂದು ನಿಗದಿ ಮಾಡಿ, ಇದಕ್ಕಿಂತ ಹೆಚ್ಚಿನ ಗಂಟೆಗಳ ದುಡಿತಕ್ಕೆ (ಓವರ್‌ಟೈಂ) 1 1/4 ಪಟ್ಟು ಕೂಲಿ ಕೊಡಬೇಕೆಂಬ ನಿಯಮ ಜಾರಿಗೆ ಬಂತು.

1922ರ ಗಯಾ ಕಾಂಗ್ರೆಸ್‌ನಲ್ಲಿ ಹಂಚಲಾದ ಭಾರತೀಯ ಕಮ್ಯುನಿಸ್ಟ ಪಕ್ಷದ ಕಾರ್ಯಕ್ರಮದ ಕರಡಿನಲ್ಲಿ ದೇಶದ ಕಾರ್ಮಿಕ ವರ್ಗದಲ್ಲಿ ಹೆಚ್ಚುತ್ತಿದ್ದ ಸಮರಶೀಲ ಮನೋಭಾವನೆಯನ್ನು ಬಿಂಬಿಸಲಾಗಿತ್ತು. "ಎಂಟು ಗಂಟೆಗಳ ಕೆಲಸದ ಅವಧಿ, ಕನಿಷ್ಠ ಕೂಲಿ ಮತ್ತು ಉತ್ತಮತರ ಮನೆ ವ್ಯವಸ್ಥೆ" ಯ ಕೈಗಾರಿಕಾ ಕಾರ್ಮಿಕರ ಬೇಡಿಕೆಗಳನ್ನು ಈ ಕಾರ್ಯಕ್ರಮ ಮಂಡಿಸಿತ್ತು. ಆದರೆ ಸ್ವಾಭಾವಿಕವಾಗಿಯೇ ಬೂರ್ಜ್ವಾ ರಾಷ್ಟ್ರೀಯ ನಾಯಕತ್ವ 8 ಗಂಟೆಗಳ ಬೇಡಿಕೆಗೆ ಬೆಂಬಲ ನೀಡಿಲ್ಲ ಏಕೆಂದರೆ ಇದು ಭಾರತದ ಬೂರ್ಜ್ವಾ ವರ್ಗದ ಹಿತಾಸಕ್ತಿಗಳಿಗೆ ಅನುಗುಣವಾಗಿರಲಿಲ್ಲ.

10 ಗಂಟೆಗಳ ಬೇಡಿಕೆ ಈಡೇರಿದ ಮೇಲೂ ಕೆಲಸದ ಅವಧಿ ಇನ್ನೂ ಕಡಿಮೆ ಮಾಡುವ ಬೇಡಿಕೆಯ ಮೇಲೆ ಮುಷ್ಕರ ಹೋರಾಟಗಳು ಮುಂದುವರಿದವು. ಅಧಿಕೃತ ಅಂಕೆಸಂಖ್ಯೆಗಳ ಪ್ರಕಾರ ರಜೆ ಮತ್ತು ಕೆಲಸದ ಅವಧಿ ಕಡಿತದ ಬಗ್ಗೆ 1921 ರಿಂದ 1928ರ ಅವಧಿಯಲ್ಲಿ 64 ಮುಷ್ಕರಗಳು ನಡೆದವು ಇವುಗಳಲ್ಲಿ 32 ಬಂಗಾಳದಲ್ಲಿ, 24 ಮುಂಬಯಿ ಪ್ರೆಸಿಡೆನ್ಸಿಯಲ್ಲಿ, 5 ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ, ತಲಾ 2 ಬಿಹಾರ ಮತ್ತು ಒರಿಸ್ಸಾಗಳಲ್ಲಿ, 1 ಉ ಪ್ರ. ದಲ್ಲಿ ನಡೆದವು.

1928 ರಲ್ಲಿ ಇಡೀ ಬಂಡವಾಳಶಾಹಿ ಜಗತ್ತು ತೀವ್ರ ಹಿಂಜರಿತದಲ್ಲಿ ಸಿಕ್ಕಿಬಿದ್ದಾಗ, ಭಾರತದಲ್ಲೂ ಅದರ ಪರಿಣಾಮಗಳು ಕಂಡು ಬಂದವು. ಮುಂಬಯಿ ಮಿಲ್ ಮಾಲಕರು ಹಿಂಜರಿತದ ಪರಿಣಾಮಗಳನ್ನು ಕಾರ್ಮಿಕರಿಗೆ ದಾಟಿಸುವ ಪ್ರಯತ್ನದಲ್ಲಿ ಕೆಲಸದ ಅವಧಿ ಹೆಚ್ಚಿಸುವ ಪ್ರಯತ್ನ ನಡೆಸಿದರು. ಏಪ್ರಿಲ್ 1928 ರಲ್ಲಿ ಮುಂಬಯಿ ಮಿಲ್ ಕಾರ್ಮಿಕರ ಮುಷ್ಕರ ಸಮಿತಿ ಮಿಲ್ ಮಾಲಕರು ತಮ್ಮ ಪ್ರಯತ್ನವನ್ನು ನಿಲ್ಲಿಸಬೇಕು ಮತ್ತು "ಕೆಲಸದ ಅವಧಿಯಲ್ಲಿ ಯಾವುದೇ ಹೆಚ್ಚಳ ಇರಕೂಡದು" ಎಂದು ತನ್ನ ಬೇಡಿಕೆ ಮುಂದಿಟ್ಟಿತ್ತು.

8 ಗಂಟೆಗಳ ಕೆಲಸದ ಬೇಡಿಕೆ ದೇಶದಲ್ಲಿ ಬದಲಾಗುತ್ತ ನಡೆದಿದ್ದು, ಹಲವಾರು ಮುಷ್ಕರ ಹೋರಾಟಗಳಲ್ಲಿ ಇದನ್ನು ಎತ್ತಲಾಯಿತು. ಕಾರ್ಮಿಕರ ಬಗ್ಗೆ ರಚಿತವಾದ ರಾಯಲ್ ಕಮಿಶನ್‌ನ ಮುಂದೆ ಹಲವಾರು ಸಂಘಟನೆಗಳು ಈ ಬಗ್ಗೆ ಮನವಿ ಸಲ್ಲಿಸಿದ್ದು, ಕಮಿಶನ್ ಇದನ್ನು ಗಣನೆಗೆ ತೆಗೆದುಕೊಳ್ಳಬೇಕಾಯಿತು. ಆದರೆ, ಕಮಿಶನ್‌ನ ಬಹುಸಂಖ್ಯಾತ ಸದಸ್ಯರು ಈ ಕೆಳಗಿನ ಕಾರಣಕ್ಕೆ ಈ ಬೇಡಿಕೆಯನ್ನು ಪುರಸ್ಕರಿಸಲು ಒಪ್ಪಲಿಲ್ಲ.

"ಕಾರ್ಮಿಕರು ಪಾಶ್ಚಿಮಾತ್ಯ ಮಾದರಿಯ ಶಿಸ್ತು ಬೆಳೆಸಿಕೊಳ್ಳುವವರೆಗೆ 8 ಗಂಟೆ ಕೆಲಸ ಅಪೇಕ್ಷಣೀಯವಲ್ಲವೆಂದು ಕೈಗಾರಿಕೆಯ ದೃಷ್ಟಿಯಿಂದ ಮಾಲಕರ ವಾದ ಸರಿಯಾದದ್ದೇ, ಎಂಟುವರೆ ಗಂಟೆ ಅವಧಿ ಸಹ ತೀವ್ರ ಅಸ್ತವ್ಯಸ್ತತೆ ಉಂಟುಮಾಡಬಹುದು." (ಕಮಿಶನ್ ವರದಿ ಪುಟ 45)

ಆದರೆ ಕಮಿಶನ್‌ನ ಮೂವರು ಸದಸ್ಯರು ಶ್ರೀ ಕ್ಲಿಫ್, ಎನ್. ಎಮ್. ಜೋಶಿ, ಮತ್ತು ದಿವಾನ್ ಚಮನ್ ಲಾಲ್—ಭಾರತದ ಕಾರ್ಮಿಕರ ಅನಿಸಿಕೆಗಳಿಗೆ ದನಿಕೊಟ್ಟರು. ವರದಿಯಲ್ಲಿ "ಅವರ ಅಭಿಪ್ರಾಯದ ಪ್ರಕಾರ ಭಾರತದ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಖಾನೆಯ ಅತ್ಯಗತ್ಯ ಬೇಕುಗಳಲ್ಲಿ ಮೊದಲನೆಯದು ಕೆಲಸದ ಅವಧಿ ಕಡಿತ ಎರಡನೆಯದು ಸೂಕ್ತ ವಿಶ್ರಾಂತಿ ಅವಧಿ. ಅವರ ಅಭಿಪ್ರಾಯ ಪಡುವುದೆಂದರೆ ಕಾರ್ಖಾನೆಗಳಲ್ಲಿ 8 ಗಂಟೆ ಕೆಲಸದ ಪ್ರಸಕ್ತ ಪರಿಸ್ಥಿತಿಯಲ್ಲಿ ಅಪೇಕ್ಷಣೀಯ ಮಾತ್ರವಲ್ಲ ಅಗತ್ಯ ಮತ್ತು ಕಾರ್ಯಸಾಧ್ಯ." (ವರದಿ ಪುಟ 46)

(6ನೇ ಪುಟಕ್ಕೆ)

ತ್ರಿಪುರ ಎಡರಂಗ ಸರಕಾರದ ಸಾಧನೆಗಳು

—ಬಿಮಲ್‌ಸಿಂಗ್

ಭಾರತ ದೇಶದ ಈಶಾನ್ಯ ದಿಕ್ಕಿನ ಕೊನೆಯಲ್ಲಿರುವ 22 ಲಕ್ಷ ಜನ ಸಂಖ್ಯೆಯ ಚಿಕ್ಕ ದೇಶ ತ್ರಿಪುರದಲ್ಲಿ 1978 ರಿಂದ ಸಿ. ಪಿ. ಐ. (ಎಂ) ಮುಖಂಡತ್ವದ ಎಡರಂಗ ಸರಕಾರ ಅಸ್ತಿತ್ವದಲ್ಲಿದೆ. 978 ರ ವಿಧಾನ ಸಭಾ ಚುನಾವಣೆಯಲ್ಲಿ ತ್ರಿಪುರದ ರೈತರು, ಕಾರ್ಮಿಕರು, ಬಡವರೆಲ್ಲ ಸೇರಿ 37 ವರ್ಷದ ಕಾಂಗ್ರೆಸ್ ಆಡಳಿತೆಯನ್ನು ಕೊನೆಗೊಳಿಸಿ ಬದಲಿ ಸರಕಾರ ರಚಿಸಿದ್ದಾರೆ. ಅದು ಒಂದೆರಡು ವರ್ಷಗಳ ಸಾಧನೆಯಲ್ಲ. ತ್ರಿಪುರದಲ್ಲಿ ಗುಡ್ಡಗಾಡು ಪ್ರದೇಶದ ರಾಜಮಹಾರಾಜರು ಅಧಿಕಾರ ಚಲಾಯಿಸುತ್ತಿದ್ದರು. ಅವರ ದುರಾಡಳಿತೆಯ ವಿರುದ್ಧ ಕಮ್ಯುನಿಸ್ಟ್ ಪಾರ್ಟಿ ಸತತಹೋರಾಡುತ್ತ ಬಂದಿತ್ತು. ಆ ಹೋರಾಟ ಸಶಸ್ತ್ರ ಹೋರಾಟವಾಗಿ ಪರಿವರ್ತನೆ ಗೊಂಡಾಗ ಕಮ್ಯುನಿಸ್ಟ ಪಾರ್ಟಿ ಅಧಿಕಾರಕ್ಕೆ ಬಂದರೆ ತನ್ನ ಸರ್ವಸ್ವವನ್ನು ಕಳೆದುಕೊಳ್ಳಬೇಕಾದೀತೆಂಬ ಭೀತಿಯಿಂದ ಅಲ್ಲಿ ಆಡಳಿತೆ ನಡೆಸುತ್ತಿದ್ದ ಮಹಾರಾಜರು ತ್ರಿಪುರವನ್ನು 1949 ರಲ್ಲಿ ಭಾರತದೊಡನೆ ವಿಲೀನಗೊಳಿಸಿದರು. ಅನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ ಸರಕಾರವೂ ಜನರ ಸಮಸ್ಯೆ ಬಗೆಹರಿಸದೆ ಆ ಹಿಂದುಳಿದ ರಾಜ್ಯಕ್ಕೆ ಹೆಚ್ಚಿನ ಧನ ಸಹಾಯ ಮಾಡದೆ, ಪ್ರಗತಿಗೆ ಅಡ್ಡಿ ಮಾಡಿದ್ದರಿಂದ ಕೆಂಬಾವುಟದ ನೇತೃತ್ವದಲ್ಲಿ ಬಡಜನರು ಸತತ ಹೋರಾಟ ಮಾಡಿ ತ್ಯಾಗ ಬಲಿದಾನದ ಮೂಲಕ ತ್ರಿಪುರಾದಲ್ಲಿ ಮಾರ್ಕ್ಸವಾದಿ ಕಮ್ಯುನಿಸ್ಟ ಪಾರ್ಟಿ ಅಧಿಕಾರಕ್ಕೆ ಬರಲು ಸಾಧ್ಯವಾಗಿದೆ ಅದು ಅಕಸ್ಮಾತ್ತಾಗಿ ಅಧಿಕಾರಕ್ಕೆ ಬಂದಿರುವುದಲ್ಲೆಂದು, ಅಖಿಲ ಭಾರತ ತೋಟ ಕಾರ್ಮಿಕರ ಒಕ್ಕೂಟದ ಉಪಾಧ್ಯಕ್ಷರೂ, ತ್ರಿಪುರಾವಿಧಾನ ಸಭೆಯ ಉಪಸಭಾಪತಿಗಳಾದ ಬಿಮಲ ಸಿಂಘ ಅವರು ಚಿಕ್ಕಮಗಳೂರಿನಲ್ಲಿ ಮೇ 17–18 ರಂದು ಸೇರಿದ್ದ ಕರ್ನಾಟಕ ಪ್ಲಾಂಟೇಶನ್ ಕಾರ್ಮಿಕರ ರಾಜ್ಯ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಭಾಷಣ ಮಾಡುತ್ತಾ ಹೇಳಿದರು.

ಭಾರತ ದೇಶದ ವಿಭಜನೆಯನಂತರ ಪೂರ್ವ ಪಾಕಿಸ್ಥಾನದಿಂದ ಬಂಗಾಲಿ ನಿರಾಶ್ರಿತರು ತ್ರಿಪುರಕ್ಕೆ ಬಂದು ನೆಲೆಸಿದ ಕಾರಣದಿಂದಾಗಿ ಅಲ್ಲಿಯ ಗುಡ್ಡಗಾಡು ಜನಾಂಗ ಅಲ್ಪಸಂಖ್ಯಾಕರಾಗಿ, ಬಂಗಾಲಿ ಮಾತಾಡುವವರು ಬಹುಸಂಖ್ಯಾಕರಾದರೆಂದೂ, ಕಾಂಗ್ರೆಸ್ಸಿನವರು ಬಂಗಾಲಿ ಮಾತನಾಡುವವರನ್ನು ಸ್ಥಳೀಯ ಜನರ ವಿರುದ್ಧ ಎತ್ತಿಕಟ್ಟಿ ಅಂತರಿಕ ಸಂಘರ್ಷಕ್ಕೆ ಕಾರಣೀಭೂತರಾಗಿದ್ದಾರೆಂದು ಆರೋಪ ಹೊರಿಸಿದರು. ಸಿ ಐ ಪಿ. (ಎಂ) ಮುಖಂಡತ್ವದಲ್ಲಿರುವ ಈಚಿಕ್ಕ ರಾಜ್ಯ ಕಾಂಗ್ರೆಸ್ಸಿನವರಿಗಷ್ಟೇ ಅಲ್ಲ ಅಮೇರಿಕದ ಸಾಮ್ರಾಜ್ಯಶಾಹಿಗಳಿಗೂ ತಲೆನೋವಾಗಿದೆಂದೂ, ಹೇಗಾದರೂ ಮಾಡಿ ಆ ಸರಕಾರವನ್ನು ಉರುಳಿಸಲು ಸಾಮ್ರಾಜ್ಯಶಾಹಿಗಳೂ, ಕಾಂಗ್ರೆಸ್ಸಿನವರೋ ಭಯೋತ್ಪಾದಕರಿಗೆ, ಜಾತೀಯವಾದಿಗಳಿಗೆ, ತ್ರಿಪುರಾ ಉಪಜಾತಿ ಸಮಿತಿಯವರಿಗೆಲ್ಲಾ ಧನ ಸಹಾಯ ಮಾಡಿ, ಪ್ರೋತ್ಸಾಹ ನೀಡಿ, ಎಲ್ಲ ತರದ ಕುತಂತ್ರದಲ್ಲಿ ತೊಡಗಿದ್ದಾರೆಂದೂ ಆರೋಪಿಸಿದರು. ಅವರ ಗುಂಡಾಗಿರಿಗೆ ಸಾವಿರಾರು ಜನ ಬಲಿಯಾಗುತ್ತಿದ್ದಾರೆಂದೂ, ಭಯೋತ್ಪಾದಕರಿಗೆ ಬಂಗ್ಲಾದೇಶದಲ್ಲಿ ಶಸ್ತ್ರ ಒದಗಿಸಿ ಟ್ರೆನಿಂಗ ಕೊಡಲಾಗುತ್ತಿದೆಂದೂ ಹೇಳಿದರು. ಸಿ. ಪಿ ಐ (ಎಂ) ಹೇಳುತ್ತಿರುವಂತೆ, ಪಂಜಾಬ, ಅಸ್ಸಾಂ ಮೊದಲಾದ ಸಮಸ್ಯೆಗಳನ್ನು ರಾಜಕೀಯವಾಗಿ ಬಗೆಹರಿಸಲು ಕಾಂಗ್ರೆ ವಿಫಲವಾಗಿರುವಾಗ, ತ್ರಿಪುರದ ತಮ್ಮ ಸರಕಾರ ಭಯೋತ್ಪಾದಕ ಚಟುವಟಿಕಗಳಲ್ಲಿ ತೊಡಗಿರುವ ಯುವಕರ ತಂದೆ–ತಾಯಿ, ಸಂಬಂಧಿಕಲ್ಲಿ ರಾಜಕೀಯ ತಿಳುವಳಿಕೆ ಮೂಡಿಸುವುದರಲ್ಲಿ ಸಫಲರಾಗಿ, ಕಳೆದ ಕೆಲವು ತಿಂಗಳಿಂದ ನೂರಾರು ಭಯೋತ್ಪಾದಕರು ಸರಕಾರಕ್ಕೆ ಶರಣಾಗತರಾಗಿ ತ್ರಿಪುರ ಎಡರಂಗ ಸರಕಾರಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಮಾಡಿ, ಅದರ ರಕ್ಷಣೆಗೆ ಪ್ರತಿಜ್ಞೆ ಕೈಗೊಂಡಿದ್ದಾರೆಂದೂ ಅಂಥ ಛಿದ್ರಕಾರಿ ಶಕ್ತಿಗಳನ್ನು ನಾಶಮಾಡುವ ಶಕ್ತಿ ತಮ್ಮ ಸರಕಾರಕ್ಕಿದೆಂದೂ ಹೇಳಿದರು. ಎಡರಂಗ ಅಧಿಕಾರಕ್ಕೆ ಬಂದ ನಂತರ ಅಧಿ 60,000 ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಲಾಗಿದೆಂದೂ 52 ಚಹಾ ತೋಟಿಗಳಲ್ಲಿಯ ಕಾರ್ಮಿಕರಿಗೆ ಭದ್ರತೆ ನೀಡಿ ಅವರ ವೇತನ ಹೆಚ್ಚಿಸಿ ಅವರಿಗೆಲ್ಲ ಪ್ರತಿತಿಂಗಳು 250 ಗ್ರಾಂ ಚಹಾಪುಡಿಯನ್ನು ಮಾಲಕರುಪುಕ್ಕಟೆಯಾಗಿ ಕೊಡುವ ವ್ಯವಸ್ಥೆ ಮಾಡಲಾಗಿದೆಂದು ಕಾರ್ಮಿಕರು ಮುಷ್ಕರ ಹೂಡಿದರೆ ಪೋಲೀಸರು ಅವರ ಮೇಲೆ ದಬ್ಬಾಳಿಕೆ ಮಾಡದೆ, ಅವರಿಗೆ ರಕ್ಷಣೆ ನೀಡುತ್ತಿದ್ದರೆಂದು, 7 ಚಹಾ ತೋಟಗಳನ್ನು ರಾಷ್ಟ್ರೀಕರಣ ಮಾಡಲಾಗಿದೆಂದು ಖಾಸಗಿ ತೋಟಗಳಲ್ಲಿ ಉತ್ಪಾದನೆ ಇಳಿಮುಖವಾಗುತ್ತಿರುವಾಗ; ರಾಷ್ಟ್ರೀಕೃತ ತೋಟಗಳಲ್ಲಿ ಹೊಸ ತಳಿಗಳನ್ನು ಹಚ್ಚಿ, ಸುಧಾರಿಸಿ ಹೆಚ್ಚು ಉತ್ಪನ್ನ ಮಾಡಿ ತೋರಿಸಲಾಗುತ್ತಿದೆಂದು, ಈ ರೀತಿ ಖಾಸಗೀ ಮತ್ತು ರಾಷ್ಟ್ರೀಕೃತ ತೋಟಗಳ ದೃಶ್ಯವನ್ನು ತುಲನೆ ಮಾಡಿ ರಾಷ್ಟ್ರೀಕರಣದ ಲಾಭವನ್ನು ಕೆಲಸಗಾರರಿಗೆ ಒದಗಿಸಲು ಸಾಧ್ಯವಾಗಿದೆಂದು ವಿವರಿಸಿ ಕರ್ನಾಟಕದ ತೋಟ ಕಾರ್ಮಿಕರು ಬಲಿಷ್ಟ ಸಂಘಟನೆ ಬೆಳೆಸಿ, ಹೋರಾಡಬೇಕೆಂದು ತ್ರಿಪುರದ ಕಾರ್ಮಿಕರೆಲ್ಲ ಅಂಥ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುತ್ತಾರೆಂಬ ಆಶ್ವಾಸನೆ ನೀಡಿದರು.

ತ್ರಿಪುರ ಸರಕಾರವನ್ನು ರಕ್ಷಿಸಿರಿ.

ಜನಸಾಮಾನ್ಯರ ಸತತ ಹೋರಾಟದ ಫಲವಾಗಿ ಅಧಿಕಾರಕ್ಕೆ ಬಂದಿರುವ ತ್ರಿಪುರ ಎಡರಂಗ ಸರಕಾರವನ್ನು ಹೇಗಾದರೂ ಮಾಡಿ ಉರುಳಿಸುವ ಪ್ರಯತ್ನ ನಡೆದಿದೆ, ಆ ಸರಕಾರವನ್ನುಳಿಸುವ ಜವಾಬ್ದಾರಿ ಕರ್ನಾಟಕದ ಹಾಗೂ ಇಡೀ ದೇಶದ ಕಾರ್ಮಿಕರ ಮೇಲಿದೆಂದೂ ವಿದ್ಯಾರ್ಥಿಗಳೇ, ಯುವಜನತೆಯೂ ಹಾಗೂ ದುಡಿಯುವಜನತೆ ತ್ರಿಪುರ ಎಡರಂಗ ಸರಕಾರದ ಸಾಧನೆಗಳನ್ನು ಜನತೆಯಲ್ಲಿ ಪ್ರಚಾರ ಗೊಳಿಸಿಯೂ ಅದರ ಸರಕಾರ ಅಧಿಕಾರದಲ್ಲಿ ಬರುವಂತೆಯೂ ದುಡಿಯಬೇಕೆಂದು ತ್ರಿಪುರ ವಿಧಾನಸಭೆಯ ಉಪಸಭಾಪತಿ ಬಿಮಲ್ ಸಿಂಗೆ ಅವರು ಮೇ 19 ರಂದು ಭದ್ರಾವತಿಯಲ್ಲಿ ಡಿ. ವ್ಯಾ. ಎಫ್. ಐ. ಜಿಲ್ಲಾ ಸಮಾವೇಶದಲ್ಲಿ ಭಾಷಣ ಮಾಡುತ್ತಾ ಕರೆ ನೀಡಿದರು.

ಉಕ್ಕು ಮತ್ತು ಕಬ್ಬಿಣ ಎಷ್ಟು ಖರ್ಚಾಗುತ್ತಿದೆ ಅದರ ಮೇಲೆ ಒಂದು ದೇಶದ ಪ್ರಗತಿಯನ್ನು ಅಳೆಯಬಹುದಾಗಿದೆ. ಹಾಗಿರುವಾಗ ಭದ್ರಾವತಿಯ ಉಕ್ಕಿನ ಕಾರ್ಖಾನೆ ಇಂದುಮುಚ್ಚುವ ಪರಿಸ್ಥಿತಿಯಲ್ಲಿದೆಂಬುದನ್ನು ಕೇಳಿ ತನಗೆ ಆಶ್ಚರ್ಯವಾಗುತ್ತಿದೆಂದು, ಕೇಂದ್ರ—

(6ನೇ ಪುಟಕ್ಕೆ)

ಕೆಲಸದ ಗಂಟೆಗಳಲ್ಲಿ ಇನ್ನೂ ಕಡಿತಕ್ಕೆ ಹೋರಾಟ

(4ನೇ ಪುಟದಿಂದ)

ಕೆಲಸದ ಅವಧಿ ಬಗ್ಗೆ ILO ಸಮಾವೇಶ

ಅಂತರಾಷ್ಟ್ರೀಯ ಕಾರ್ಮಿಕ ಚಳುವಳಿಯ ಒತ್ತಾಯದ ಮೇರೆಗೆ 1919 ರಲ್ಲಿ ರಚಿತವಾದ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO) 8 ಗಂಟೆ ದಿನದ ಪರಿಕಲ್ಪನೆಗೆ ಸೂಕ್ತ ಪ್ರಾಮುಖ್ಯತೆ ಕೊಡಬೇಕಾಯಿತು. ಮೊದಲನೆಯ ILO ಸಮಾವೇಶ ದಿನಕ್ಕೆ 8 ಗಂಟೆ ಮತ್ತು ವಾರಕ್ಕೆ 48 ಗಂಟೆಗಳ ಮಿತಿಗೆ ಸಂಬಂಧಿಸಿದ್ದು 1921 ರಿಂದ ಇದನ್ನು ಅನ್ವಯ ಮಾಡಲು ನಿರ್ಧರಿಸಲಾಯಿತು. ಭಾರತದಲ್ಲಿ 8 ಗಂಟೆಗಳಿಗಿಂತ ಹೆಚ್ಚಿನ ಮಿತಿಗೆ ಅನುಮತಿ ನೀಡುವ ಸಮಾವೇಶದ ನಿರ್ಣಯವನ್ನು ಬ್ರಿಟಿಷ್ ಸರ್ಕಾರ ಅಂಗೀಕರಿಸಿತು, ಆದರೆ ಸಮಾವೇಶದ ತಿರುಳನ್ನು ಒಪ್ಪಿಕೊಳ್ಳಲಿಲ್ಲ. ರಾಯಲ್ ಕಮಿಷನ್‌ನ ಅಲ್ಪಸಂಖ್ಯಾತ ಸದಸ್ಯರು ILO ಸಮಾವೇಶದ ಪೂರ್ತಿ ಜಾರಿಯನ್ನು ಬಯಸಿದ್ದರು. ಭಾರತದ ಬಂಡವಾಳಶಾಹಿಗಳು 8 ಗಂಟೆ ಕೆಲಸವನ್ನು ಬಲವಾಗಿ ವಿರೋಧಿಸಿದರು. ಬ್ರಿಟಿಷ್ ಬಂಡವಾಳ ಭಾರತದಲ್ಲಿ ಇದ್ದುದರಿಂದ ಬ್ರಿಟಿಷ್ ಸರಕಾರ ಈ ವಿರೋಧಕ್ಕೆ ಕುಮ್ಮಕ್ಕು ನೀಡಿತು. ಇಬ್ಬರಿಗೂ ಭಾರತದ ಕಾರ್ಮಿಕನ ಹೆಚ್ಚಿನ ದುಡಿತದಲ್ಲಿ ಸ್ಥಾಪಿತ ಹಿತಾಸಕ್ತಿ ಇತ್ತು.

1931ರಲ್ಲಿ ಕರಾಚಿ ಕಾಂಗ್ರೆಸ್ ಅಧಿವೇಶನದಲ್ಲಿ ಹಲವು ಭಾರತೀಯ ಭಾಷೆಗಳಲ್ಲಿ ಅನುವಾದಿಸಿ ಹಂಚಲಾದ ಕ್ರಿಯಾ ವೇದಿಕೆ ಎಂಬ ಕರಡು ಕಾರ್ಯಕ್ರಮ "ಭಾರತದ ಕ್ರಾಂತಿಯ ಪ್ರಸಕ್ತ ಹಂತದಲ್ಲಿ" 5 ಮುಖ್ಯ ಕರ್ತವ್ಯಗಳನ್ನು ಗುರುತಿಸಿತ್ತು. ಇದರಲ್ಲಿ "8 ಗಂಟೆಯ ದಿನದ ಅಂಗೀಕಾರ, ಮತ್ತು ಕಾರ್ಮಿಕರ ಸ್ಥಿತಿ ಗತಿಯಲ್ಲಿ ತೀವ್ರತರ ಸುಧಾರಣೆ ; ಕೂಲಿಯಲ್ಲಿ ಹೆಚ್ಚಳ ಮತ್ತು ನಿರುದ್ಯೋಗಿಗಳಿಗೆ ಸರ್ಕಾರಿ ಸಹಾಯ" ಸೇರಿತ್ತು. ಈ ವೇದಿಕೆ IMPRECOR ನ 1930 ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟಿತವಾಗಿತ್ತು. ಈ ಬೇಡಿಕೆಯನ್ನು 30ರ ದಶಕದ ಹೆಚ್ಚಿನ ಮುಷ್ಕರ ಹೋರಾಟಗಳಲ್ಲಿ ಎತ್ತಲಾಗುತಿತ್ತು.

ಈ ಹೋರಾಟಗಳ ಒತ್ತಡದಿಂದಾಗಿ ಭಾರತ ಸರ್ಕಾರ ಭಾರತದಲ್ಲಿ ಕಾರ್ಮಿಕರ ಬಗೆಗಿನ ರಾಯಲ್ ಕಮಿಶನ್ ಸಲಹೆ ಮೇರೆಗೆ ಕಾರ್ಖಾನೆಗಳ ಮಸೂದೆಗೆ ತಿದ್ದುಪಡಿ ಮಾಡಬೇಕಾಯಿತು. ಎಲ್ಲಾ ಶಾಶ್ವತ ಕಾರ್ಖಾನೆಗಳಲ್ಲಿ ದಿನಕ್ಕೆ 10 ಗಂಟೆ ಮತ್ತು ವಾರಕ್ಕೆ 54 ಗಂಟೆಗಳ ಮಿತಿ ವಿಧಿಸಲಾಯಿತು. ವಾರದ ರಜಾದಿನ ಸೇರಿ ಸರಾಸರಿ 9 ಗಂಟೆ ಮಿತಿ ವಿಧಿಸಿದಂತಾಯಿತು. ಆದರೆ ತಾತ್ಕಾಲಿಕ ಕಾರ್ಖಾನೆಗಳಿಗೆ ಮಿತಿ ಮೊದಲಿನಂತೆ ಇತ್ತು. ತಾತ್ಕಾಲಿಕ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರಿಗೂ ಈ ಮಿತಿಯನ್ನು ವಿದೇಶ ಸರ್ಕಾರ ಕಡಿಮೆ ಮಾಡಲಿಲ್ಲ.

ಆದರೆ ಹಲವು ಕೈಗಾರಿಕೆಗಳಲ್ಲಿ, ಪೂರ್ಣ ಮೂರು ಪಾಳಿಗಳ ಕೆಲಸ ಆರಂಭವಾದಾಗ ಕಾರ್ಮಿಕರು ಹೋರಾಟಗಳ ಮೂಲಕ 8 ಗಂಟೆ ದಿನವನ್ನು ಪಡೆದರು. ಎರಡನೆಯ ಮಹಾಯುದ್ಧ ಸಮಯದಲ್ಲಿ ಇನ್ನೂ ಹಲವು ಕೈಗಾರಿಕೆಗಳಲ್ಲಿ ಮೂರು ಪಾಳಿಗಳು ಆರಂಭವಾದಾಗ ಇದು ಹರಡಿತು.

ಆದರೆ ಕಾರ್ಖಾನೆಗಳ ಮಸೂದೆಗೆ ವಾರಕ್ಕೆ 48 ಗಂಟೆಗಳ ಮಿತಿಯ ತಿದ್ದುಪಡಿ ಬಂದಿದ್ದು 1948 ರಲ್ಲಿ ಭಾರತದಲ್ಲಿ 8 ಗಂಟೆ ದಿನದ ಪರಿಕಲ್ಪನೆಗೆ ಕಾನೂನಿನ ಚೌಕಟ್ಟು ದೊರಕಿದ್ದು ಇದು ಮೊದಲ ಬಾರಿ.

ಆದರೆ ಇಂದಿಗೂ ಹಲವು ಸಂಘಟನೆಗಳಲ್ಲಿ ಇದಕ್ಕಿಂತ ಹೆಚ್ಚಿನ ದುಡಿತ ನಡೆಯುತ್ತಿದೆ. ಸಾಗಾಣಿಕೆ ಕೈಗಾರಿಕೆಯಲ್ಲಿ ಸುಮಾರು 9 ಗಂಟೆ, ರೈಲ್ವೇ ಲೋಕೋ ಸಿಬ್ಬಂದಿ 1‌೦ ಗಂಟೆ ದುಡಿತ ಇದಕ್ಕೆ ಕೆಲವು ಉದಾಹರಣೆಗಳು. ILO ಸಮಾವೇಶದಲ್ಲಿ ಮಾಡಿದ ಕೆಲವು ಮಾರ್ಪಾಡುಗಳ ಆಶ್ರಯವನ್ನು ಭಾರತ ಸರ್ಕಾರ ಈ ವಿಷಯದಲ್ಲಿ ಹೊಂದಿದೆ. ನಮ್ಮ ದೇಶದಲ್ಲಿ ಎಲ್ಲಾ ಸಂಘಟನೆಗಳಲ್ಲೂ ಈ ಪರಿಕಲ್ಪನೆಯ ಪೂರ್ಣ ಜಾರಿ ಮಾಡಿಸಲು ಟ್ರೇಡ್ ಯೂನಿಯನ್ ಚಳುವಳಿಗೆ ಸಾಧ್ಯವಾಗಿಲ್ಲ ಈಗಲೂ ಕೃಷಿ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರು ಸೂರ್ಯ ಮೂಡಿದಾಗಿನಿಂದ ಮುಳುಗುತನಕ ದುಡಿಯುತ್ತಾರೆ.

ಮೇ ದಿನದ ಶತಮಾನೋತ್ಸವವನ್ನು ಆಚರಿಸುವ ಮತ್ತು ಜಗತ್ತಿನಲ್ಲೆಲ್ಲಾ ಕಾರ್ಮಿಕ ವರ್ಗದ ಕ್ರಾಂತಿಕಾರಿ ಚಳುವಳಿಯ ಮಹತ್ಸಾಧನೆಗಳನ್ನು ಪುನಃ ಪರಿಶೀಲಿಸುವ ಈ ಸಂದರ್ಭದಲ್ಲಿ ಭಾರತದ ಕಾರ್ಮಿಕ ವರ್ಗ ಎಲ್ಲಾ ಸಂಘಟನೆಗಳಲ್ಲಿ 8 ಗಂಟೆ ದಿನವನ್ನು ಜಾರಿ ಮಾಡುವ ಪಣ ತೊಡಬೇಕು. ಇದು ಮಾತ್ರ 8 ಗಂಟೆ ದಿನದ ಬೇಡಿಕೆಗೆ ಪ್ರಾಣತೆತ್ತ ಹುತಾತ್ಮರಿಗೆ ಸಲ್ಲಿಸಬಹುದಾದ ಶ್ರದ್ಧಾಂಜಲಿ.

ಕಾರ್ಮಿಕ ವರ್ಗ ಮತ್ತು ಟ್ರೇಡ್ ಯೂನಿಯನ್ ಚಳುವಳಿ ಜಗತ್ತಿನ ತುಂಬ ಕೆಲಸದ ಗಂಟೆಗಳಲ್ಲಿ ಇನ್ನೂ ಹೆಚ್ಚಿನ ಕಡಿತಕ್ಕೆ ಒತ್ತಾಯ ಮಾಡುತ್ತಿದೆ. ಹೋರಾಟಗಳ ಮೂಲಕ ಹೆಚ್ಚಿನ ಅಭಿವೃದ್ಧಿ ಬಂಡವಾಳಶಾಹಿ ದೇಶಗಳಲ್ಲಿ ವಾರಕ್ಕೆ 40 ಗಂಟೆ ದುಡಿತ ಮತ್ತು 2 ರಜಾದಿನಗಳು ಜಾರಿಗೆ ಬಂದಿವೆ. ILO ಸಮಾವೇಶದ ಬಗ್ಗೆ ನ್ಯಾಶನಲ್ ಲೇಬರ್ ಇನ್‌ಸ್ಟಿಟ್ಯೂಟ್ ನಡೆಸಿದ ಒಂದು ವಿಚಾರ ಗೋಷ್ಠಿಯಲ್ಲಿ ಎಲ್ಲಾ ಟ್ರೇಡ್ ಯೂನಿಯನ್ ಪ್ರತಿನಿಧಿಗಳು ಏಕ ಕಂಠದಲ್ಲಿ ಈ ಬೇಡಿಕೆಯನ್ನು ಎತ್ತಿದರು. ಇತ್ತೀಚಿನ ಕೆಲವು ಬೇಡಿಕೆಗಳ ಪಟ್ಟಿಯಲ್ಲಿ ಇದನ್ನು ಸೇರಿಸಲಾಗಿದೆ.

ಮೇ ದಿನದ ಶತಮಾನೋತ್ಸವದಂದು ಪ್ರಸಕ್ತ ಶೋಷಣೆಯ ಸಮಾಜ ವ್ಯವಸ್ಥೆಯನ್ನು ಕೊನೆಗಾಣಿಸಿ, ಸಮಾಜವಾದಕ್ಕೆ ಹೋರಾಟ ಮಾಡಲು ಪಣತೊಡಬೇಕು. ಈ ಹೋರಾಟದ ಕಾರ್ಯಕ್ರಮದಲ್ಲಿ ವಾರಕ್ಕೆ 40 ಗಂಟೆಗಳ ದುಡಿತದ ಬೇಡಿಕೆಗೆ ಹೋರಾಟ ಮುಖ್ಯ ಭಾಗವಾಗಬೇಕು.

ಸುದ್ದಿ - ಸಮಾಚಾರ

ಧರಣಿ ಸತ್ಯಾಗ್ರಹ

ರಾಯಚೂರು ಜಿಲ್ಲೆಯ ಕಚೀಲ ಪರ್ವಿ ಕ್ಯಾಂಪಿನಲ್ಲಿ ನಡೆದ ಘಟನೆಯನ್ನು ದುರುಪಯೋಗ ಮಾಡಿಕೊಂಡು ಕೆಲವು ದುಷ್ಕರ್ಮಿಗಳು ಗೊಂದಲ ಎಬ್ಬಿಸುವ ಹೊಂಚಿನಲ್ಲಿದ್ದಾರೆ. ಸರಕಾರ ಆ ಕ್ಯಾಂಪಿನ ಜನರಿಗೆ ರಕ್ಷಣೆ ನೀಡುತ್ತಿಲ್ಲ. ಆಂಧ್ರದಿಂದ ಬಂದು ಕಳೆದ ಹಲವಾರು ವರ್ಷಗಳಿಂದಲೂ ಒಕ್ಕಲತನದಲ್ಲಿ ನಿರತರಾಗಿರುವ ಈ ಜನರಿಗೆ ರಕ್ಷಣೆ ನೀಡುವುದು, ತಪ್ಪಿತಸ್ತರ ಮೇಲೆ ಉಗ್ರ ಕ್ರಮ ಕೈಗೊಳ್ಳುವುದು ಸರಕಾರದ ಕರ್ತವ್ಯ. ಪೋಲೀಸರೂ ಸರಕಾರವೂ ಇದರಲ್ಲಿ ವಿಫಲವಾಗಿರುವುದರಿಂದ ಈ ಕ್ಯಾಂಪಿನ ಜನರಿಗೆ ರಕ್ಷಣೆ ನೀಡಿ, ತಪ್ಪಿತಸ್ತರನ್ನು ದಂಡಿಸಬೇಕೆಂದು ಒತ್ತಾಯಿಸಲು ರಾಯಚೂರ ಜಿಲ್ಲಾ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷ 29-4-86 ರಂದು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಒಂದು ದಿವಸದ ಧರಣಿ ನಡೆಸಿ, ಮನವಿ ಸಮರ್ಪಿಸಿದೆ.

ಬಂಟ್ವಾಳ

ಬಂಟ್ವಾಳ ತಾಲೂಕಿನ ಟೂರಿಸ್ಟ್ ಟ್ಯಾಕ್ಸಿ ಮತ್ತು ವ್ಯಾನ್ ಚಾಲಕರ ಸಂಘ (ಸಿ ಐ. ಟಿ. ಯು.) 2ನೇ ವಾರ್ಷಿಕ ಸಭೆಯು 16-5-96 ರಂದು ವಾಸುಗಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಶ್ರೀ ಬಿ. ಪ್ರಭಾಕರ್ ಮಂಡಿಸಿದರು. ಸಭೆಯಲ್ಲಿ ಕಾರ್ಮಿಕ ಮುಖಂಡರಾದ ಪಿ. ಉಮೇರ ಬಂಡಾರಿ ಮತ್ತು ರೈತ ಸಂಘದ ಕಾರ್ಯದರ್ಶಿ ಬಿ.ನಾರಾಯಣ ಮಾತನಾಡಿದರು.

ಸಭೆಯು ನಿರ್ಣಯ ಒಂದನ್ನು ಅಂಗೀಕರಿಸಿ, ಬ್ರೇಕ್ ಇನ್‌ಸ್ಪೆಕ್ಟರರು ಹಾಗೂ ಕೆ. ಎಸ್. ಆರ್. ಟಿ. ಸಿ. ಅಧಿಕಾರಿಗಳು ಹಾಕಿದ ಸುಳ್ಳು ಕೇಸನ್ನು ಪರಿಶೀಲಿಸದೆ ಟೂರಿಸ್ಟ್ ವ್ಯಾನ್‌ಗಳ ಪರ್ಮಿಟನ್ನು ಸಸ್ಪೆಂಡ್ ಮಾಡುವ ಆರ್. ಟಿ ಓ. ರವರ ಕ್ರಮವನ್ನು ತೀವ್ರವಾಗಿ ಖಂಡಿಸಿ ಕೇಸನ್ನು ಕೋರ್ಟಿಗೆ ಕಳುಹಿಸಬೇಕೆಂದು ಕೇಳಿಕೊಂಡಿದೆ. ಆರ್. ಟಿ. ಓ. ರವರು ತನ್ನ ಏಕಪಕ್ಷೀಯ ನೀತಿಯನ್ನು ಕೈಬಿಡದಿದ್ದರೆ ಆರ್. ಟಿ. ಓ. ರವರ ಆಫೀಸಿನ ಮುಂದೆ ಜಿಲ್ಲೆಯ ಮೋಟಾರು ಟ್ರಾನ್ಸ್‌ಪೋರ್ಟ್ ಎಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನಿನ ಕರೆಯಂತೆ ಧರಣಿ ನಡೆಸುವುದಾಗಿ ಎಚ್ಚರಿಸಿದೆ.

ಟೂರಿಸ್ಟ್ ಟ್ಯಾಕ್ಸಿ ಸಂಘಟನೆಗೆ ಶ್ರೀ ಕೃಷ್ಣಪ್ಪ ಸಪಲ್ಯ ಮತ್ತು ಬಿ. ಮುಹಮ್ಮದ್ ಇವರನ್ನು ಸಂಚಾಲಕರನ್ನಾಗಿ ಆರಿಸಿದೆ.

ಟೂರಿಸ್ಟ್ ವ್ಯಾನ್ ಸಂಘಟನೆಗೆ ಶ್ರೀ ಬಾಲಕೃಷ್ಣ ಗೌಡ ಮತ್ತು ಶಾಂತಪ್ಪ ಸಾಲೆಯಾನ್ ಸಂಚಾಲಕರನ್ನಾಗಿ ಆರಿಸಿದೆ

ಆರಂಭದಲ್ಲಿ ಶ್ರೀ ಪ್ರಭಾಕರ್ ಸ್ವಾಗತಿಸಿ ಕೊನೆಗೆ ವಂದಿಸಿದರು.

ಗುಲ್ಬರ್ಗಾ

ಭೀಕರ ಬರಗಾಲವನ್ನೆದುರಿಸುತ್ತಿರುವ ಗುಲ್ಬರ್ಗಾ ಜಿಲ್ಲೆಯ ರೈತರಿಗೆ ನಬಾರ್ಡ ಬ್ಯಾಂಕಿನಿಂದ ಸಾಲ ಕೊಡಿಸಬೇಕೆಂದೂ, ವಸೂಲಿಯನ್ನು ನಿಲ್ಲಿಸಬೇಕೆಂದೂ ಒತ್ತಾಯಿಸಿ, ರೈತ ಸಂಘದ ಪರವಾಗಿ ಆಳಂದ ತಾಲೂಕಿನ ಲಾಡ ಮುಗಳಿಯಲ್ಲಿರುವ ಕೃಷ್ಣಾ ಗ್ರಾಮೀಣ ಬ್ಯಾಂಕಿನೆದುರು ಉಪವಾಸ ಸತ್ಯಾಗ್ರಹ ನಡೆಸಲಾಯಿತು. ರೈತ ಸಂಘದ ಕಾರ್ಯದರ್ಶಿ ಕಲ್ಲಪ್ಪ ಕಿರಣಗಿ. ಭೀಮಶಾ ಸೀತಮಾರ, ಶಾಂತವೀರ ಮಜ್ಜಿಗಿ ಹಾಗೂ ಕಾರ್ಪೋರೇಟರ್ ಸಿ. ಎ. ಪಾಟೀಲ್ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಚರ್ಚಿಸಿದ ಪರಿಣಾಮವಾಗಿ, ನಾಬಾರ್ಡ ಬ್ಯಾಂಕಿನ ಕುರಿತು ಕೇಂದ್ರ ಸರಕಾರ ನಿರ್ಣಯಿಸಬೇಕಾಗಿರುವುದರಿಂದ ಅವರಿಗೆ ತಿಳಿಸಲಾಗುವುದೆಂದೂ, ತನ್ನ ಅಧಿಕಾರದೊಳಗಿರುವ ಬೇಡಿಕೆಗಳನ್ನು ಬಗೆಹರಿಸಲಾಗುವುದೆಂದೂ ಆಶ್ವಾಸನೆ ನೀಡಿದರು.

ಮಂಗಳೂರು

ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನಿನ 49ನೇ ವಾರ್ಷಿಕ ಮಹಾಸಭೆ ಪಿ. ರಾಮಚಂದ್ರರಾವ್ ಅವರ ಅಧ್ಯಕ್ಷತೆಯಲ್ಲಿ ಸೇರಿ ಕಾರ್ಯದರ್ಶಿ ಜಿ. ಉಮಾನಾಥ ಅವರು ಮಂಡಿಸಿದ ವರದಿಯನ್ನು ಚರ್ಚಿಸಿ ಸ್ವೀಕರಿಸಿತು.

ಮುಂದಿನ ವರ್ಷಕ್ಕೆ ಪಿ. ರಾಮಚಂದ್ರರಾವ್ ಅಧ್ಯಕ್ಷ, ಕೆ. ಮೂಸಬ್ಬ ಮತ್ತು ಯು. ಪಿ. ಡಿ'ಸೋಜಾ ಉಪಾಧ್ಯಕ್ಷರು ಜಿ. ಉಮಾನಾತ್ ಕಾರ್ಯದರ್ಶಿ ಸದಾಶಿವಶೆಟ್ಟಿ ಮತ್ತು ಕೆ ವಸಂತ ಜೊತೆ ಕಾರ್ಯದರ್ಶಿಗಳು ಕೆ. ಜನಾರ್ಧನ ಕೋಶಾಧಿಕಾರಿಗಳಿರುವ ಸಮಿತಿಯನ್ನು ರಚಿಸಲಾಯಿತು. ನಂತರ ರೈತ ಸಂಘದ ಪರವಾಗಿ ಕೆ. ಜನಾರ್ಧನ ಹಾಗೂ, ಕ್ಯಾಶು ಎಂಡ್ ಎಲ್ಲ್ಯಾಡ್ ವರ್ಕರ್ಸ್ ಯೂನಿಯನಿನ ಪರವಾಗಿ ಕಮಲಾಕ್ಷ ಬಂಗೇರ ಅವರು ಸಂದೇಶ ನೀಡಿದರು.

ಕಾರ್ಮಿಕರಿಗೆ ಸಮವಸ್ತ್ರ, ಗ್ರಾಚ್ಯುಟಿ ಸಕಾಲದಲ್ಲಿ ಒದಗಿಸಬೇಕೆಂದು ಕೇಳುವ ಹಾಗೆಯೇ ಇನ್ನಿತರ ನಿರ್ಣಯಗಳನ್ನು ಪಾಸುಮಾಡಲಾಯಿತು ಕೆ. ಮಂಜುನಾಥ್ ಅವರ ಅಭಾರ ಮನ್ನಣೆಯೊಡನೆ ಸಮ್ಮೇಳನ ಮುಕ್ತಾಯವಾಯಿತು.

ಕುಂದಾಪುರ

ಕುಂದಾಪುರ ಆಟೋರಿಕ್ಷಾ ಚಾಲಕರ ಸಂಘದ 9ನೇ ವಾರ್ಷಿಕ ಸಭೆ ಎಚ್. ಕರುಣಾಕರ ಅವರ ಅಧ್ಯಕ್ಷತೆಯಲ್ಲಿ ಸೇರಿ ಅಚ್ಯುತ ಭಟ್ ಅವರು ಮಂಡಿಸಿದ ಚಟುವಟಿಕೆಗಳ ವರದಿ ಮತ್ತು ಲೆಕ್ಕ ಪತ್ರ ಸ್ವೀಕರಿಸಿತು.

ವಿ. ಮಹಾಬಲ ಮತ್ತು ಕೆ ಶಂಕರ್ ಅವರು ಮುಖ್ಯ ಆಮಂತ್ರಿತರಾಗಿ ಭಾಷಣ ಮಾಡಿ ಸಿ ಐ. ಟಿ.ಯು. ವಿನ ಧ್ಯೇಯ ಧೋರಣೆಗಳನ್ನು ವಿವರಿಸಿ. ಕಾರ್ಮಿಕವರ್ಗ ಆರ್ಥಿಕ ಬೇಡಿಕೆಗಳ ಜೊತೆಯಲ್ಲಿಯೇ ರಾಜಕೀಯ ಹೋರಾಟಗಳಲ್ಲೂ ಭಾಗವಹಿಸಿ ಬದಲಿ ಸರಕಾರ ರಚನೆಗೆ ಶ್ರಮಿಸಬೇಕೆಂದು ಕರೆ ನೀಡಿದರು.

ಎಚ್. ಕರುಣಾಕರನ್ ಅಧ್ಯಕ್ಷ ವಿ. ಆನಂದ್ ಮತ್ತು ಕುಂದಾಪುರ ಬಸವ ಉಪಾಧ್ಯಕ್ಷ, ವಿ. ಗೋಪಾಲ ಕಾರ್ಯದರ್ಶಿ, ಅಚ್ಯುತಭಟ್, ಮತ್ತು ಗುರುರಾಜ್ ಜೊತೆ ಕಾರ್ಯದರ್ಶಿ, ಎನ್. ಉಮೇಶ್ ಕೋಶಾಧಿಕಾರಿಗಳಾಗಿರುವ ಹೊಸ ಕಮಿಟಿ ಚುನಾಯಿಸಲಾಯಿತು. ಕೊನೆಗೆ ವಿ. ಗೋಪಾಲ ಅಭಾರ ಮನ್ನಿಸಿದರು.

ಕೃಷಿ ಕೂಲಿಗಾರನ ಮೇಲೆ ಹಲ್ಲೆ

ಮಂಗಳೂರು ತಾಲೂಕಿನ ಬೊಳಿಯೂರು ಗ್ರಾಮದ ಕೃಷಿ ಕೂಲಿಗಾರ ಶಾಂತಪ್ಪ ಗೌಡರ ಮೇಲೆ ಸ್ಥಳೀಯ ಭೂಮಾಲಿಕರು ದಬ್ಬಾಳಿಕೆ ಮಾಡಿದ್ದರಿಂದಾಗಿ ಅವನ ಕೈ ಮೂಳೆ ಮುರಿದು ಮೈ ತುಂಬ ಗಾಯವಾಗಿದೆ. ಆಸ್ಪತ್ರೆಯ ಡಾಕ್ಟರು ಭೂಮಾಲಿಕರ ಪ್ರಭಾವಕ್ಕೊಳಗಾಗಿ ಎರಡನೇ ದಿವಸವೇ ಶಾಂತಪ್ಪನನ್ನು ಮನೆಗೆ ಕಳುಹಿಸಿದ್ದಾರೆ. ಭೂಮಾಲಕರು ಇನ್ನೂ ಹೆಚ್ಚಿನ ದಬ್ಬಾಳಿಕೆ ನಡೆಸುವುದಾಗಿ ಬೆದರಿಕೆ ಹಾಕಿದ್ದಾರೆ. ಮಂಗಳೂರು ತಾಲೂಕು ರೈತ ಸಂಘ ಈ ದಬ್ಬಾಳಿಕೆಯನ್ನು ಖಂಡಿಸಿದೆಯಲ್ಲದೆ, ಭೂಮಾಲಕರ ಹಾಗೆಯೇ ಡಾಕ್ಟರರ ಮೇಲೆ ಸರಕಾರ ಯೋಗ್ಯ ಕ್ರಮ ಕೈಗೊಳ್ಳದಿದ್ದರೆ ತೀವ್ರ ಚಳುವಳಿ ಹೂಡುವ ಬೆದರಿಕೆ ನೀಡಲಾಗಿದೆ.

ವಿಜಯಾ ಬ್ಯಾಂಕಿನ ಮೋಸದ ಪ್ರಚಾರ

ವಿಜಯಾ ಬ್ಯಾಂಕ್ ಬಹಳ ಮುಂದುವರಿದಿದೆಂದೂ, 1986ರೊಳಗೆ ರೂ. 2000 ಕೋಟಿ ಶೇಖರಿಸಲಾಗುದೆಂಬ ಜಂಭದ ಪ್ರಚಾರವನ್ನು ಮಾಲಕರು ಮಾಡುತ್ತಿದ್ದರೂ, ಆ ಮುಂದುವರಿಕೆ ದುಡಿಯುವ ಜನರನ್ನು ಶೋಷಿಸುತ್ತಿದೆ, ನಿರುದ್ಯೋಗಿಗಳನ್ನು ಬೆಳೆಸುತ್ತಿದೆಂದು ವಿಜಯಾ ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನಿನ ಪ್ರ. ಕಾರ್ಯದರ್ಶಿಯವರಾದ ಬಾಲಕೃಷ್ಣ ಶೆಟ್ಟಿಯವರು ತಿಳಿಸಿದ್ದಾರೆ, ದೇಶದಲ್ಲಿ ನಿರುದ್ಯೋಗ ಬೆಳೆಯುತ್ತಿರುವಾಗ, ಬ್ಯಾಂಕು ಕಚೇರಿಗಳನ್ನು ಯಂತ್ರೀಕರಣಗೊಳಿಸುತ್ತಿದೆ. ಅದರಿಂದಾಗಿ ಹೊಸ ನೇಮಕಾತಿಗೆ ತಡೆಯೊಡ್ಡಿದೆ. ನಗರದ ಹಲವಾರು ಶಾಖೆಗಳಲ್ಲಿ ಈಗಾಗಲೇ ಮೆಶಿನು ಮತ್ತು ಕಂಪ್ಯೂಟರ್‌ಗಳು ಕೆಲಸ ಮಾಡುತ್ತಿವೆ. ನೇಮಕಾತಿ ಮಾಡದಿರುವುದನ್ನೂ, ಪೂರ್ವಭಾವಿಯಾಗಿ ಕೆಲಸದಿಂದ ನಿವೃತ್ತಿ ಮಾಡುತಿರುವುದರ ವಿರುದ್ಧ ಪ್ರತಿಭಟಿಸುತ್ತಿರುವುದನ್ನು ಕಂಡು ಯೂನಿಯನನ್ನು ಮುರಿಯುವ ಉದ್ದೇಶದಿಂದ ಮ್ಯಾನೇಜಮೆಂಟ್ ನೌಕರದಾರರನ್ನು ಕೆಲಸದಿಂದ ತೆಗೆದು ಹಾಕುವ, ದೂರದ ಊರಿಗೆ ಬದ್ಲಿ ಮಾಡುವಂಥ ಕ್ರಮ ಕೈಗೊಂಡಿದೆ. ನೌಕರದಾರರಿಗೆ ಮನೆ ಕಟ್ಟಿಸಿಕೊಳ್ಳಲು ಉದಾರ ಸಾಲ ಕೊಡುವ ಕ್ರಮವನ್ನೂ ಕೈಬಿಟ್ಟಿದೆ. ಇವುಗಳ ವಿರುದ್ಧ ಬೆಂಗಳೂರು ನಗರದ ಎಲ್ಲಾ ಶಾಖೆಗಳೆದುರು ಧರಣಿ ಆಚರಿಸಲಾಗಿದೆ.

ಬಳ್ಳಾರಿ ಕೊಳಚೆ ಪ್ರದೇಶ ಜನರ ಹೋರಾಟ

ಬಳ್ಳಾರಿ ಗಾಂಧಿನಗರದಲ್ಲಿರುವ ಮಹಾನಂದಿಕೊಟ್ಟಂ ಪ್ರದೇಶದ ನಾಗರೀಕರು ಡಿ. ವೈ. ಎಫ್. ಐ ಅಡಿಯಲ್ಲಿ ಒಂದು ವರ್ಷದಿಂದ ಸತತವಾಗಿ ಹೋರಾಟ ಮಾಡುತ್ತಾ ಬಂದಿದ್ದಾರೆ ಈ ಪ್ರದೇಶದಲ್ಲಿ ಯಾವುದೇ ನಾಗರೀಕ ಸೌಲಭ್ಯಗಳಿಲ್ಲದೇ ಬಳಲುತ್ತಿದ್ದಾರೆ. ಕಾರಣ ಈ ಪ್ರದೇಶವನ್ನು ಕೊಳಚೇ ಪ್ರದೇಶವೆಂದು ಘೋಷಿಸಿ ಅಲ್ಲಿರುವ ಜನರಿಗೆ ನಾಗರೀಕ ಸೌಲಭ್ಯ ಒದಗಿಸಬೇಕೆಂದು ಹೇಳಲಾಗಿದೆ.

ಹತ್ತು (1) ದಿನಗಳೊಳಗಾಗಿ ಮುಂದಿನ ಕೆಲಸ ಪ್ರಾರಂಭಿಸದಿದ್ದಲ್ಲಿ ಕಛೇರಿಗೆ ಪಿಕೆಟಿಂಗ್ ಮಾಡುತ್ತೇವೆ ಎಂದು ಎಚ್ಚರಿಕೆ ಕೊಡಲಾಗಿದೆ.

ಮಹಾನಂದಿಕೊಟ್ಟಂ ಪ್ರದೇಶದಿಂದ 350 ಹೆಂಗಸರು. 260 ಗಂಡಸರು, ಮುಖ್ಯ ಬೀದಿಗಳಲ್ಲಿ ಹಾದು ಅಧಿಕಾರಿಗಳಿಗೆ ಮನವಿ ಪತ್ರಗಳ ಮೂಲಕ ಎಚ್ಚರಿಕೆ ನೀಡಿದ್ದಾರೆ.

ತ್ರಿಪುರ ಎಡರಂಗ ಸರಕಾರದ ಸಾಧನೆಗಳು

(5ನೇ ಪುಟದಿಂದ)

ರಾಜ್ಯ ಸರಕಾರಗಳು ಅನುಸರಿಸುತ್ತಿರುವ ಆರ್ಥಿಕ ನೀತಿಯಿಂದಾಗಿ ಕಾರ್ಖಾನೆಗಳೆಲ್ಲ ಮುಚ್ಚಲ್ಪಟ್ಟು, ಲಕ್ಷಾವಧಿ ಜನ ನಿರುದ್ಯೋಗಿಗಳಾಗುತ್ತಿದ್ದಾರೆಂದೂ, ಕಾರ್ಮಿಕರಿಗೂ ಯುವಜನತೆಗೂ, ಈ ನೀತಿಯಿಂದಾಗಿ ಅಪಾರ ಹಾನಿಯಾಗುತ್ತದೆಂದು, ಕಾರಣ ಎಲ್ಲರೂ ಕೂಡಿ ಅಂಥ ನೀತಿಯನ್ನು ವಿರೋಧಿಸಬೇಕೆಂದು ಬಿಮಲ್ ಸಿಂಗೆ ಹೇಳಿ ಇತರ ವರ್ಗದ ಜನರೊಡನೆ ಸೇರಿ ಯುವಕರೂ ನಿರುದ್ಯೋಗಿಗಳೂ ಹೊಸ ಸಮಾಜದ ನಿರ್ಮಾಣಕ್ಕೆ ರಾಜೀವ್ ಗಾಂಧಿಯ ಆರ್ಥಿಕ ನೀತಿಯ ವಿರುದ್ಧ ಸಂಘಟಿತ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ನಂಜನಗೂಡಿನಲ್ಲಿ ಮೇ ಶತಮಾನೋತ್ಸವ ದಿನಾಚರಣೆ

ನಂಜನಗೂಡಿನಲ್ಲಿ ಪೌರ ಕಾರ್ಮಿಕರನ್ನೊಳಗೊಂಡು ಮೆರವಣಿಗೆ ನಡೆಸಿ ಸಾರ್ವಜನಿಕ ಭಾಷಣದ ಮೂಲಕ ಮೇ ದಿನಾಚರಣೆ ಆಚರಿಸಲಾಯಿತು. ಸಿ.ಕೆ.ಮೋನ್, ಶಾಂತಪ್ಪ, ಆರ್. ಜಯಕುಮಾರ ಮಾತಾಡಿದರು. ಮೋಹನ ಕುಮಾರ ಅಧ್ಯಕ್ಷತೆ ವಹಿಸಿದ್ದರು. ಜಾರ್ಜ ಕ್ರಾಂತಿಗೀತೆ ಹಾಡಿದರು.

ಮೇ ದಿನದ ರಜೆಯ ಲಾಭ ಸಿಗಲಿ

ಕೇಂದ್ರ ಮತ್ತು ರಾಜ್ಯ ಸರಕಾರಗಳು ಮೇ ದಿನವನ್ನು ಸಂಬಳ ಸಹಿತ ರಜಾ ದಿನವನ್ನಾಗಿ ಸಾರಿದ್ದು, ಆದರ ಲಾಭ ಅಂಗಡಿಗಳು, ವ್ಯಾಪಾರ ಸಂಸ್ಥೆಗಳ ನೌಕರರಿಗೂ, ನಗರ ಸಭೆಯ ಪೌರ ಕಾರ್ಮಿಕರಿಗೂ, ಕೆ.ಎಸ್.ಆರ್.ಟಿ.ಸಿ.ಯ ಡ್ರೈವರ್ ಕಂಡಕ್ಟರಿಗೂ ಹಾಗೆಯೇ ಇತರ ಅತ್ಯಾವಶ್ಯಕ ಸೇವೆಯಲ್ಲಿರುವ ಎಲ್ಲ ನೌಕರರಿಗೂ ಸಿಗಬೇಕಾದ್ದು ಅತ್ಯಗತ್ಯ. ಆ ದಿವಸ ರಜೆ ಕೊಡಲು ಸಾಧ್ಯವಾಗದಿದ್ದಲ್ಲಿ ಮೇ ದಿನದ ದುಡಿತಕ್ಕೆ ಹೆಚ್ಚಿನ ವೇತನ ಕೊಡಲೇಬೇಕು. ಈ ದಿಕ್ಕಿನಲ್ಲಿ ಕಾರ್ಮಿಕ ಸಂಘಗಳು ಸರಕಾರಕ್ಕೆ ಮನವಿ ಸಲ್ಲಿಸಲಿ ಹೋರಾಡಲಿ.

Malleswaram Bangalore 3.

ಮೂಲಭೂತ ಹಕ್ಕಾಗಲಿ

(1ನೆಯ ಪುಟದಿಂದ)

ಭಾಷೆ. ಗಡಿ ಸಮಸ್ಯೆಗಳಿಗೆ ಯುವಕರನ್ನು ಪ್ರಯೋಗಿಸಲಾಗುತ್ತಿದೆ. ಮಣ್ಣಿನ ಮಕ್ಕಳ ವಾದ, ಭಾಷೆ ಆಧಾರದಲ್ಲಿ ಜಗಳ, ಬೇರೆ ರಾಜ್ಯದವರನ್ನು ನೇಮಿಸಬೇಡಿರೆಂದು ಕಾಂಗ್ರೆಸ್ ರಾಜ್ಯ ಸರಕಾರಗಳಿಗೆ ಗುಪ್ತ ಸೂಚನೆ. ಇವುಗಳಿಂದಾಗಿ ಯುವಕರು ಸಂಕುಚಿತ ಭಾವನೆಗಳಿಗೊಳಗಾಗಿ ತಂತಮ್ಮೊಳಗೆ ಜಗಳವಾಡುವಂತಾಗಿದೆ. ಬಂಡವಾಳಶಾಹಿ ನೀತಿ ವಿರುದ್ಧ ಹೋರಾಟ ಅಗತ್ಯವೆಂದು ಹೇಳಿ, ಪಶ್ಚಿಮ ಬಂಗಾಲದಲ್ಲಿ ಜಾತಿ-ಭಾಷೆ ಎತ್ತಿ ಕಟ್ಟುವವರಿಲ್ಲೆಂದೂ, ಆದ್ದರಿಂದ ಅಲ್ಲಿಯ ನಿರುದ್ಯೋಗಿಗಳು ಪ್ರತಿಗಾಮಿಗಳ ಪ್ರಚಾರಕ್ಕೆ ಬಲಿಯಾಗುತ್ತಿಲ್ಲೆಂದೂ, ಪ. ಬಂಗಾಲದಲ್ಲಿ ನಿರುದ್ಯೋಗಿಗಳಿಗೆ ಪರಿಹಾರ ಒದಗಿಸಲಾಗುತ್ತಿದೆಯೆಂದೂ, ಉದ್ಯೋಗ ವಿನಿಮಯ ಕೇಂದ್ರದ ಮೂಲಕವೇ ಉದ್ಯೋಗ ಒದಗಿಸಲಾಗುತ್ತದೆಂದೂ ಹೇಳಿದರು.

ನಿಸರ್ಗ ಧರ್ಮದಲ್ಲಿ ನಿರುದ್ಯೋಗವಿಲ್ಲ. ಬೈಬಲ್, ಖುರಾನ್, ಗೀತಗಳಲ್ಲಿಯೂ ನಿರುದ್ಯೋಗಿಗಳಿರಬೇಕೆಂಬುದಿಲ್ಲ. ಆದರೆ ಈಗಿನ ಸಾಮಾಜಿಕ ಪದ್ಧತಿಯ ಕಾನೂನು ನಿರುದ್ಯೋಗಿಗಳನ್ನು ಬೆಳೆಸುವುದಾಗಿದೆ. ಅಂದರೆ ಬಂಡವಾಳಶಾಹಿ ಕಾನೂನು ಅದಾಗಿದೆಂದು ಹೇಳಿದರು.

ಕಾಡಿನಲ್ಲಿರುವ ಹುಲಿಗೆ, ರಕ್ಷಣೆ ಒದಗಿಸುತ್ತಾರೆ. ಆದರೆ ಜನರಿಗೆ ಮಾತ್ರ ಅದು ಲಭ್ಯವಿಲ್ಲ. ಕೆಲಸದ ಹಕ್ಕು ಮೂಲಭೂತ ಹಕ್ಕಾಗಿ, ನಿರುದ್ಯೋಗ ಭತ್ಯೆಗಾಗಿ ಚಳುವಳಿಗಳು ನಮ್ಮ ಹೋರಾಟದ ಭಾಗವಾಗಿ ಬೆಳೆದು ಬರ ಬೇಕಾಗಿದೆ ಆ ಕಾರಣದಿಂದಲೇ ರಾಷ್ಟ್ರೀಯ ಚಳುವಳಿ ಸಮಿತಿ ಈ ಸಮಸ್ಯೆಯನ್ನೆತ್ತಿಕೊಂಡು ಹೋರಾಟದ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ನಿರುದ್ಯೋಗಿಗಳ ಬೇಡಿಕೆಗಳಿಗಾಗಿ ಹೋರಾಡುವಾಗಲೇ ಬಂಡವಾಳ ಶಾಹಿ ಸರಕಾರದ ವಿರುದ್ಧ, ಸಮತಾವಾದಿ ಸಮಾಜ ವ್ಯವಸ್ಥೆಗಾಗಿಯೂ ಹೋರಾಡುವುದು ಅತ್ಯಗತ್ಯವೆಂದು ಹೇಳಿದರು.

ಸಿ. ಐ. ಟಿ. ಯು ಕಾರ್ಯದರ್ಶಿ ಸಿ.ನಂಜುಂಡಪ್ಪನವರು ನಿರುದ್ಯೋಗಿಗಳ ಸಮಸ್ಯೆ ಪರಿಹಾರಕ್ಕಾಗಿ ಚಳುವಳಿಯ ನಿರ್ಣಯ ಮಂಡಿಸಿದರು. ವಿ. ಜೆ. ಕೆ. ನಾಯರ್, ನಿತ್ಯಾನಂದಸ್ವಾಮಿ, ಕೆ ಪುರಶೋತ್ತಮ, ಎಸ್. ಎಂ ಬಾಶಂ, ಎಸ್. ಟಿ. ವಸಂತಕುಮಾರ್, ಸಂಗ್ರಾಮ್ ಮೊದಲಾದವರು ಬೆಂಬಲ ನೀಡಿ ಮಾತನಾಡಿದರು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸಿ. ಐ. ಟಿ. ಯು ಅಧ್ಯಕ್ಷರಾದ ಎಸ್ ಸೂರ್ಯನಾರಾಯಣರಾವ್ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ನಿರುದ್ಯೋಗ ಸಮಸ್ಯೆಯ ವಿವರಗಳನ್ನೂ ಸಂಘಟಿತ ಕಾರ್ಮಿಕ ವರ್ಗದ ಜವಾಬ್ದಾರಿಯನ್ನೂ ವಿವರಿಸಿ, ಕರ್ನಾಟಕ ರಾಜ್ಯಾದ್ಯಂತ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಸರಕಾರಿ ಕಚೇರಿಗಳ ಮುಂದೆ ಮತಪ್ರದರ್ಶನ, ಧರಣಿ, ಹೋರಾಟಗಳನ್ನು ನಡೆಸಿ ಬಲಿಷ್ಠವಾದ ಸಂಘಟನೆಯನ್ನು ಬೆಳೆಸಬೇಕೆಂದು ಕರೆ ನೀಡಿದರು

ಎನ್. ಕೆ. ಉಪಾಧ್ಯಾಯರು ಆಭಾರ ಮನ್ನಿಸಿದರು.

ಹರಿಹರ, ಹುಬ್ಬಳ್ಳಿ, ಧಾರವಾಡ, ಕೋಲಾರ ಜಿಲ್ಲೆಗಳಿಂದ ಹೆಚ್ಚು ಪ್ರತಿನಿಧಿಗಳನ್ನೊಳಗೊಂಡ ಒಂದು ಸಾವಿರ ಪ್ರತಿನಿಧಿಗಳು ಸಮಾವೇಶದಲ್ಲಿ ಹಾಜರಿದ್ದರು.ಕರ್ನಾಟಕ ರಾಜ್ಯಸಿ.ಐ.ಟಿ.ಯು. ಈ ಸಮಾವೇಶವನ್ನು ಸಂಘಟಿಸಿತ್ತು. ಸಮಾವೇಶದಲ್ಲಿ ಹೋರಾಟದ ಕಾರ್ಯಕ್ರಮ ಹಮ್ಮಿಕೊಳ್ಳುವ ನಿರ್ಣಯ ಕೈಗೊಳ್ಳಲಾಯಿತು. ಆಗಸ್ಟ್ 8 ರಂದು ಉದ್ಯೋಗ ವಿನಿಮಯ ಕೇಂದ್ರಗಳೆದುರು ಮತಪ್ರದರ್ಶನ ಧರಣಿ ನಡೆಸಬೇಕೆಂದು ನಿರ್ಧರಿಸಲಾಯಿತು.

ಗಧಾಪ್ರಹಾರ

(1ನೆಯ ಪುಟದಿಂದ)

ತನಿಖಾ ಆಯೋಗ ನೇಮಿಸಿದರೂ ಕೂಡ ಅಂಥ ಆಯೋಗಗಳ ವರದಿಗಳನ್ನು ಸಾರ್ವಜನಿಕರಿಗೆ ಅಥವಾ ಲೋಕಸಭೆ, ವಿಧಾನಸಭೆಗಳಿಗೆ ತಿಳಿಯಪಡಿಸುವುದರ ಮೇಲೆ ಪ್ರತಿಬಂಧ ಹೇರುತ್ತಿರುವುದನ್ನು ನೋಡುವಾಗ ರಾಜೀವ್ ಗಾಂಧಿ ಮಿನಿ ತುರ್ತುಪರಿಸ್ಥಿತಿಯನ್ನು ಹೇರುತ್ತಿರುವುದು ಕಂಡು ಬರುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಯಾವದೇ ಘಟನೆಗಳ ಕುರಿತು ತನಿಖಾ ಆಯೋಗ ನೇಮಿಸಬೇಕೆಂಬ ವಿರೋಧ ಪಕ್ಷಗಳ ಬೇಡಿಕೆಗಳಿಗೆ ಬೆಲೆ ಇಲ್ಲದಂತಾಯಿತು. ಯಾವುದೇ ಘಟನೆಗೆ ಕಾರಣವೇನು, ತಪ್ಪಿತಸ್ಥರು ಯಾರು, ಅಂಥ ಅವಘಡ ಗಳನ್ನು ಮುಂದಾದರೂ ತಡೆಗಟ್ಟುವುದಕ್ಕೆ ಸಾಧ್ಯವಿದೆಯೇ ಎಂಬಂಶಗಳನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದಲೇ ವಿಚಾರಣಾ ಆಯೋಗಗಳನ್ನು ನೇಮಿಸಬೇಕೆಂಬ ಬೇಡಿಕೆ ಬರುತ್ತಿದೆ.

ಹೀಗಿರುವಾಗ ರಾಜೀವ್ ಗಾಂಧಿ ಸರಕಾರ ತುರ್ತು ಶಾಸನ ಘೋಷಣೆ ಏಕೆ ಮಾಡಿದರು ? ವಿಚಾರಣಾ ಆಯೋಗ ಕಾಯಿದೆಯನ್ನಯ ರಚಿಸಲಾದ ಆಯೋಗಗಳ ವರದಿಗಳನ್ನು ಕಡ್ಡಾಯವಾಗಿ ಲೋಕಸಭೆ, ವಿಧಾನಸಭೆಗಳಲ್ಲಿ ಮಂಡಿಸಬೇಕೆಂಬ ಕಾನೂನನ್ನು ತಿದ್ದುಪಡಿ ಮಾಡುವ ಮೂಲ ಉದ್ದೇಶ ಏನೆಂದರೆ ಇಂದಿರಾ ಗಾಂಧಿಯವರ ಹತ್ಯೆಗೆ ಸಂಬಂಧಿಸಿದ ಠಕ್ಕರ್ ಆಯೋಗದ ವರದಿಯನ್ನು ಕತ್ತಲೆಯಲ್ಲೇ ಮುಚ್ಚಿಡಬೇಕು ಆ ಆಯೋಗದಲ್ಲಿ ಒಳಗೊಂಡಿರುವ ವಿಷಯಗಳು ಸಾರ್ವಜನಿಕರಿಗೆ ಗೊತ್ತಾಗಬಾರದು ಎಂಬ ಒಳಗುಟ್ಟು ಇದ್ದಂತೆ ಕಂಡು ಬರುತ್ತದೆ.

ಈಗಾಗಲೇ ಹಲವಾರು ಆಯೋಗಗಳ ವರದಿಗಳು ಕೇಂದ್ರ ಸರಕಾರದ ಕಪಾಟುಗಳಲ್ಲಿ ನಿದ್ರೆ ಗೈಯ್ಯುತ್ತಿವೆ, ಜರಳೆಯಿಂದು ನಾಶವಾಗುತ್ತಿವೆ. ಆದರೂ ಕೂಡ ಈ ತಿದ್ದುಪಡಿ ತರಲಾಗಿದೆ. ಠಕ್ಕರ್ ಆಯೋಗ 27-2-86 ರಂದು ತನ್ನ ವರದಿಯನ್ನು ಸರಕಾರಕ್ಕೆ ಒಪ್ಪಿಸಿದೆ.

ಆ ವರದಿಯಲ್ಲಿ ಇಂದಿರಾ ಗಾಂಧಿಯವರ ಹತ್ಯೆಗೆ ಸಂಬಂಧ ಪಟ್ಟಂತೆ ಹಿಂದಿನ ಸಂಚು, ಗುಪ್ತದಳ, ಬೇಹುಗಾರಿಕೆ ಸಂಸ್ಥೆಗಳ ವೈಫಲ್ಯ, ಭದ್ರತಾ ವ್ಯವಸ್ಥೆಯ ಲೋಪದೋಷಗಳ ಬಗ್ಗೆ ನ್ಯಾಯಮೂರ್ತಿ ಎಂ. ಪಿ. ಠಕ್ಕರ್ ಆಯೋಗ ವಿಚಾರಣೆ ನಡೆಸಿದೆ.ಆ ವರದಿಯಲ್ಲಿ ಬಹಳ ಮಹತ್ತರವಾದವಿಷಯಗಳ ಬಹಿರಂಗಗೊಳ್ಳುವ ಸಾಧ್ಯತೆ ಬರಬೇಕು. ಹಾಗೆಯೇ ಇಂದಿರಾ ಗಾಂಧಿಯವರ ಹತ್ಯೆಯ ನಂತರ ನಡೆದ ಗಲಭೆಗಳ ತನಿಖೆ ನಡೆಸುತ್ತಿರುವ ರಂಗನಾಥ ಮಿಶ್ರಾ ಅವರ ಆಯೋಗದ ವರದಿಯನ್ನು ಮುಚ್ಚಿಡುವ ಒಳಸಂಚು ಇದಾಗಿದೆಂದು ಕಂಡು ಬರುತ್ತದೆ.

ಈ ಸುಗ್ರೀವಾಜ್ಞೆ ಯಿಂದ ಚುನಾಯಿತ ಸದಸ್ಯರ ಹಾಗೆಯೇ ಸಾರ್ವಜನಿಕರ ಮೂಲಭೂತ ಹಕ್ಕನ್ನೇ ಕಸಿದುಗೊಂಡಂತಾಗಿದೆ ಚುನಾಯಿತ ಲೋಕಸಭೆ, ವಿಧಾನ ಮಂಡಲಗಳಿಗೂ ಜನತೆಗೂ ಮಾಡಿದ ರಾಜೀವ್ ಗಾಂಧಿಯವರ ಅತಿ ದೊಡ್ಡ ದ್ರೋಹ ವಿಚಾರಣಾ ಆಯೋಗದ ವರದಿಗಳನ್ನು ಪ್ರಕಟಿಸದಿರುವುದೆಂದರೆ ತಪ್ಪಿತಸ್ಥರಿಗೆ ರಕ್ಷಣೆ ನೀಡಿದಂತೆ, ಜನರಿಗೆ ಮೋಸ ಮಾಡಿದಂತೆಯೇ ಸರಿ. ಈ ಸುಗ್ರೀವಾಜ್ಞೆಯಿಂದ ಅಧಿಕಾರಿಗಳು, ಭ್ರಷ್ಟಾಚಾರಿಗಳು, ಭಯೋತ್ಪಾದಕರಲ್ಲ ಆನಂದಪಡುವುದರಲ್ಲಿ ಸಂಶಯವಿಲ್ಲ. ಯಾಕೆಂದರೆ ತಪ್ಪಿತಸ್ಥರ ಜನದ್ರೋಹಿ, ದೇಶದ್ರೋಹಿ ಕೃತ್ಯಗಳ ವರದಿ ಇನ್ನು ಮುಂದೆ ಬೆಳಕು ಕಾಣುವುದಿಲ್ಲ, ಪ್ರಚಾರ ಪಡೆಯುವುದಿಲ್ಲ, ಜನರನ್ನು ಜಾಗೃತಿಗೊಳಿಸುವುದಿಲ್ಲ.

ಸಂವಿಧಾನಕ್ಕೆ ವಿರೋಧವಾದ, ತುರ್ತುಪರಿಸ್ಥಿತಿಗೆ ಇಣುಕು ಹಾಕುವ ಇಂಥ ಸುಗ್ರೀವಾಜ್ಞೆಗಳನ್ನು ಎಲ್ಲ ಪ್ರಜಾಪ್ರಭುತ್ವವಾದಿ ದೇಶಪ್ರೇಮಿ ಜನರೆಲ್ಲ ವಿರೋಧಿಸಲೇಬೇಕು.

ಸ್ವಾತಂತ್ರ್ಯ ರಕ್ಷಣೆಗೆ ಹೋರಾಡಿ

(1ನೆಯ ಪುಟದಿಂದ)

ಇಪ್ಪತ್ತನೇ ಶತಮಾನವು ಮಾನವನಬುದ್ಧಿಶಕ್ತಿಯ, ವಿಜ್ಞಾನದ ಮಹಾನ್ ಸಾಧನೆಗಳ ಶತಕ" ಎಂದು ನುಡಿದು "ಆದರೆ ಪ್ರಶ್ನೆಯಿರುವುದು ಯಾರ ಒಳಿತಿಗಾಗಿ ಎಂಬುದೇ" ಎಂದು ಹೇಳಿದರು. ಆಧುನೀಕರಣದಲ್ಲಿ ಎರಡು ವಿಧಾನಗಳಿವೆ. ಮೊದಲನೆಯದು ಸಮಾಜವಾದಿ ವಿಧಾನ ಸಮಾಜವಾದಿ ದೇಶಗಳಲ್ಲಿ ಆಧುನೀಕರಣ, ಕಂಪ್ಯೂಟರೀಕರಣದಿಂದ ಕಾರ್ಮಿಕರು ಉದ್ಯೋಗ ಕಳಕೊಳ್ಳುವುದಿಲ್ಲ, ನಿರುದ್ಯೋಗ ಹೆಚ್ಚುವುದಿಲ್ಲ, ಸಂಪತ್ತಿನ ಕೇಂದ್ರೀಕರಣವಾಗುವುದಿಲ್ಲ, ಬದಲಾಗಿ ಕಾರ್ಮಿಕರ ಈ ಶ್ರಮ ಹಗುರವಾಗುತ್ತದೆ. ಭೌದ್ಧಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹೆಚ್ಚು ವಿರಾಮ ಸಿಗುತ್ತದೆ. ಇನ್ನೊಂದು ವಿಧಾನ ಬಂಡವಾಳಶಾಹೀ ವಿಧಾನ. ಅತ್ಯಂತ ಮುಂದುವರಿದಿದೆಯೆನ್ನಲಾದ ಅಮೇರಿಕಾದಲ್ಲಿ ಒಂದೆಡೆ ಅತ್ಯಾಧುನಿಕ ಕಂಪ್ಯೂಟರ್‌ಗಳಿದ್ದರೆ, ಇನ್ನೊಂದೆಡೆ ಜನಸಂಖ್ಯೆಯ ೨೦೦/೦ ರಷ್ಟು ಜನ ನಿರಕ್ಷರ ಕುಕ್ಷಿಗಳು. ನಮ್ಮ ರಾಜೀವ ಗಾಂಧಿಯವರು ಅನುಸರಿಸಿರುವುದು ಈ ಬಂಡವಾಳಶಾಹೀ ವಿಧಾನವನ್ನೇ. ಈಗಾಗಲೇ ಸುಮಾರು ಹತ್ತು ಕೋಟಿ ನಿರುದ್ಯೋಗಿಗಳಿರುವ ನಮ್ಮ ದೇಶದಲ್ಲಿ ಈಗ ಕಂಪ್ಯೂಟರೀಕರಣ ಅಧಿಕೃತ ಧೋರಣೆಯಾಗಿಬಿಟ್ಟಿದೆ. ಕಂಪ್ಯೂಟರೀಕರಣದ ಮೊದಲು ಕಾರ್ಮಿಕ ಸಂಘಗಳೊಡನೆ ಪರ್ಯಾಮರ್ಶೆ ನಡೆಸಬೇಕೆಂಬ ಗಜೇಂದ್ರಗಡ್ಕರ್ ವರದಿಯ ಸಲಹೆಯನ್ನು ಮೂಲೆಗೊತ್ತಲಾಗಿದೆ. ಸರಕಾರದ ಕಂಪ್ಯೂಟರೀಕರಣ ನೀತಿ ಹೀಗೆ ಮುಂದುವರಿದರೆ ದೇಶ ಕಾರ್ಮಿಕರ ಉದ್ಯೋಗಾವಕಾಶಗಳ ಹೆಣಗಳ ಮೇಲಿಂದ ೨೧ನೇ ಶತಮಾನಕ್ಕೆ ಅತಿಯಿಸುತ್ತದೆಯೆಂದ ಕಾಂ. ಬಿ. ಟಿ. ಆರ್. ಈಗ ಉದ್ಯೋಗದಲ್ಲಿರುವವರಲ್ಲಿ 20೦/೦ರಷ್ಟೇ ಉಳಿದು ಇತರರೆಲ್ಲಾ ಬೀದಿಪಾಲಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಯಿತ್ತು. ಅದಕ್ಕನುಗುಣವಾಗಿ ಶಿಕ್ಷಣ ಪದ್ಧತಿ ರೂಪಿತಗೊಂಡಿತು. ಈಗ ಅವರಿಗೆ ಬೇಕಾಗಿರುವುದು ಅತ್ಯಂತ ಉಚ್ಚತರಬೇತಿ ಪಡೆದ ಕೆಲವೇ ಕೈಗಳು. ಹೊಸ ಶಿಕ್ಷಣ ನೀತಿ ಇದನ್ನೇ ಪ್ರತಿಫಲಿಸುತ್ತಿದೆ. ಎಂದು ಹೇಳಿ ರಾಜೀವ ಗಾಂಧಿಮನುವಿನ ಅಪರಾವತಾರವೆಂದು ಟೀಕಿಸಿದರು. ಯಾಕೆಂದರೆ ಮನುಸ್ಮೃತಿಯ ಪ್ರಕಾರ ಶೂದ್ರರಿಗೆ ಶಿಕ್ಷಣದ ಅವಕಾಶವಿಲ್ಲ, ಆದರೆ ಕೆಲಸದ ಅವಕಾಶವಿಲ್ಲವೆಂದು ಆತನೇನೂ ಹೇಳಲಿಲ್ಲ. ರಾಜೀವ ಗಾಂಧಿಯವರು ಇನ್ನೂ ಮುಂದೆ ಹೋಗಿ ಬಹು ಸಂಖ್ಯೆಯ ಜನಸಾಮಾನ್ಯರಿಗೆ ಶಿಕ್ಷಣವೂ ಬೇಡ, ಕೆಲಸವೂ ಬೇಡ ಎಂದು ಘೋಷಿಸಿ ಬಿಟ್ಟಿದ್ದಾರೆ ಈ ಹೊಸ ನೀತಿಯಲ್ಲಿ !

ಸಾರ್ವಜನಿಕ ಉದ್ದಿಮೆಯ ಕಾರ್ಮಿಕರ ಬಗ್ಗೆ ಹೇಳುತ್ತಾ "ಇದುವರೆಗೆ ನೀವು ರಕ್ಷಿತ ವಲಯದಲ್ಲಿದ್ದಿರಿ ಆದರಿಂದಾಗಿ ನಿಮ್ಮಲ್ಲಿ ಸೋಮಾರಿತನ ಮೂಡಿದೆ. ಇತರ ಕಾರ್ಮಿಕರಷ್ಟು ಸಮರಶೀಲತೆ ಕಾಣುತ್ತಿಲ್ಲ. ಆದರೆ ಇನ್ನು ಮುಂದೆ ಹೀಗಿರುವುದಿಲ್ಲ. ನೀವೂ ಇತರ ಕಾರ್ಮಿಕರಂತೆಯೇ ಎಂದು ನಿಮಗೆ ಹೇಳಲಾಗುತ್ತಿದೆ" ಎಂದು ಎಚ್ಚರಿಸಿದ ಕಾಂ. ರಣದಿವೆಯವರು ಸಾರ್ವಜನಿಕ ಉದ್ದಿಮೆಯ ಕಾರ್ಮಿಕರು ಈ ರೀತಿಯ ಹಲ್ಲೆ ಎದುರಿಸುತ್ತಿದ್ದರೆ, ಸಮಸ್ತ ದೇಶದ ವ್ಯಾಪಕ ದೃಷ್ಟಿಕೋನದಿಂದ ನೋಡಿದರೆ ರಾಜೀವ್ ಗಾಂಧಿಯವರ ನೀತಿಗಳುದೇಶದ ಆರ್ಥಿಕ ಸ್ವಾತಂತ್ರ್ಯ ಹಾಗೂ ತನ್ಮೂಲಕ ರಾಜಕೀಯ ಸ್ವಾತಂತ್ರ್ಯಕ್ಕೆ ಹೇಗೆ ಧಕ್ಕೆ ತರುತ್ತದೆ ಎಂಬುದನ್ನು ವಿವರಿಸಿದರು

(ಉಳಿದ ವರದಿ ಮತ್ತು ಗೋಷ್ಟಿಯಲ್ಲಿ ಮಂಡಿಸಲಾದ ನಿರ್ಣಯಗಳ ವಿವರ ಮುಂದಿನ ವಾರ ಪ್ರಕಟಿಸಲಾಗುವುದು)

ಮನುವಿನ ಹೊಸ ಅವತಾರ

ಈ ಸಂದರ್ಭದಲ್ಲಿ ಹೊಸ ಶಿಕ್ಷಣ ನೀತಿಯ ಬಗ್ಗೆ ಮಾತನಾಡುತ್ತಾ ಇದು ಹೊಸ ಆರ್ಥಿಕ ನೀತಿಯ ತಾರ್ಕಿಕ ಫಲ ಎಂದು ನುಡಿದ ಕಾಂ. ರಣದಿವೆ "ಸ್ವಾತಂತ್ರ್ಯಾನಂತರ ವ್ಯಾಪಕ ಕೈಗಾರಿಕೀಕರಣಕ್ಕೆ ಅಗಾಧ ಸಂಖ್ಯೆಯ ಇಂಜಿನಿಯರುಗಳ, ತಂತ್ರಜ್ಞರ,ನುರಿತ, ಅರೆನುರಿತ ಕೆಲಸಗಾರರ ಅವಶ್ಯಕತೆ

ತಿದ್ದುಪಡಿ

ಮೂರನೇ ಪುಟದಲ್ಲಿ ಉಡುಪಿ ಬೀಡಿ ಕಾರ್ಮಿಕರ ವಿಜಯ ಎಂಬ ಸುದ್ದಿಯಲ್ಲಿ ಕೆಲವು ತಪ್ಪುಗಳಾಗಿವೆ. 11 ನೇ ಸಾಲಿನಲ್ಲಿ ಮಾಲಕರು ಮಾತಾಡಲು ತಯಾರಾಗದ್ದರಿಂದ ಎಂದೂ, 29 ನೇ ಸಾಲಿನಲ್ಲಿ ಬರಹ ಎಂದೂ ಡೇವಿಡ್ ಕರ್ಕಡ, ಸಾಧುಅಮೀನ್, ಯು.ಬಿ.ಲೋಕಯ್ಯ ಎಂದು ತಿದ್ದಿ ಕೊಳ್ಳಬೇಕಾಗಿ ವಿನಂತಿ.

Printed & Published by P. Ramachandra Rao on behalf of the Communist Party of India [Marxist] Karnataka State Committee, K. V. Temple Street, Sultanpet, Bangalore-560053
Sultanpet B-53 Phone : 75331
Editorial and managerial office: L-56, K. V. Temple Street,
Editor P. Ramachandra Rao
Managing Editor : N. K Upadhyaya